janathavani@mac.com , www.janathavani.com ☎ 08192 254736 91642 99999

# ಜನತಾವಾಣಿ

ಸಂಪಾದಕರು : ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಶನಿವಾರ, ಫೆಬ್ರವರಿ 10, 2024, ದಾವಣಗೆರೆ, ಪುಟ : 8 ರೂ : 5, ಸಂಪುಟ : 50 ಸಂಚಿಕೆ : 269 RNI : 27369/75

## ಕೇಂದ್ರವೂ ಅನುದಾನದಲ್ಲಿ ಪರಿಶಿಷ್ಟರಿಗೆ ಮೀಸಲಿಡಲಿ



ಹರಿಹರ, ಫೆ. 9 - ರಾಜ್ಯದಲ್ಲಿ ಪರಿಶಿಷ್ಟರಿಗೆ ಅನುದಾನದಲ್ಲಿ ಮೀಸಲಾತಿ ಕಲ್ಪಿಸಿರುವ ರೀತಿಯಲ್ಲೇ, ಕೇಂದ್ರ ಸರ್ಕಾರವೂ ಅನುದಾನದಲ್ಲಿ ಮೀಸಲು ಕಲ್ಪಿಸಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು ಹಾಕಿದ್ದಾರೆ.

ಸಮೀಪದ ಹರಿಹರ ತಾಲ್ಲೂಕಿನ ರಾಜನಹಳ್ಳಿಯಲ್ಲಿ ಆಯೋಜಿಸಲಾಗಿದ್ದ ಮಹರ್ಷಿ ವಾಲ್ಮೀಕಿ ಜಾತ್ರೆ - 2024ರ ಎರಡನೇ ದಿನದಂದು ಆಯೋಜಿಸಲಾಗಿದ್ದ ಜನ ಜಾಗೃತಿ ಜಾತ್ರಾ ಮಹೋತ್ಸವದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು. 2013ರಲ್ಲಿ ನಾನು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡಗಳವರ ಜನಸಂಖ್ಯೆಗೆ ಅನುಗುಣವಾಗಿ, ಅನುದಾನದಲ್ಲಿ ಮೀಸಲಾತಿ ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಗಿತ್ತು ಎಂದು ಹೇಳಿದರು.

ಎಸ್‌ಸಿಎಸ್‌ಪಿ-ಟಿಎಸ್‌ಪಿ ಮೂಲಕ ಕಾನೂನು ಬದ್ಧವಾಗಿ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ (5ನೇ ಪುಟಕ್ಕೆ)

## ಬರ ನಿರ್ವಹಣೆಗೆ 860 ಕೋಟಿ ರೂ.

ದಾವಣಗೆರೆ, ಫೆ.9 - ಬರ ನಿರ್ವಹಣೆ ಸಂಬಂಧ ಕುಡಿಯುವ ನೀರು, ಮೇವು, ಉದ್ಯೋಗ ನೀಡ ಲಾಗುತ್ತಿದ್ದು, ಒಟ್ಟು 860 ಕೋಟಿ ರೂ.ಗಳನ್ನು ಎಲ್ಲ ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ ಎಂದು ಮುಖ್ಯಮಂತ್ರಿ (5ನೇ ಪುಟಕ್ಕೆ)

**ಕೆಂಪಣ್ಣ ಕಮಿಷನ್ ಆರೋಪದ ಸಾಕ್ಷಿ ನೀಡಲಿ: ಸಿಎಂ**

## ಪರಿವಾರ, ತಳವಾರರಿಗೆ ಎಸ್ಟಿ ಸ್ಥಾನ

ಹರಿಹರ, ಫೆ. 9 - ಮೈಸೂರು, ಚಾಮರಾಜನಗರ, ಹಾಸನ, ಮಂಡ್ಯ, ಕೊಡಗು ಜಿಲ್ಲೆಗಳಲ್ಲಿರುವ ಪರಿವಾರ ಮತ್ತು ತಳವಾರ ಸಮುದಾಯಗಳನ್ನು ಎಸ್.ಟಿ.ಗೆ ಸೇರಿಸಲು ರಾಜ್ಯ ಸರ್ಕಾರ ಕ್ರಮ ತೆಗೆದುಕೊಳ್ಳಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ಈ ಸಮುದಾಯ ಗಳನ್ನು ಈಗಾಗಲೇ ಎಸ್.ಟಿ.ಗೆ (5ನೇ ಪುಟಕ್ಕೆ)


**ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ**

**ಆಡಳಿತ ಮಂಡಳಿ ಚುನಾವಣೆ-2024**

ಮಾನ್ಯ ಗೌರವಾನ್ವಿತ ಷೇರುದಾರರಲ್ಲಿ ವಿನಂತಿ

ದಿನಾಂಕ : 11.02.2024ರ ಭಾನುವಾರ ನಡೆಯಲಿರುವ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ ಗುರುರಾಜ್ ಎನ್.ಎ. ಹಾಗೂ ಬೆಳ್ಳೂಡಿ ಮಂಜುನಾಥ್ ಆದ ನಾವು ಗುರು-ಹಿರಿಯರ ಹಾಗೂ ತಮ್ಮೆಲ್ಲರ ಆಶೀರ್ವಾದದೊಂದಿಗೆ ನಿರ್ದೇಶಕರ ಸ್ಥಾನಗಳಿಗೆ ಸ್ಪರ್ಧಿಸುತ್ತಿದ್ದೇವೆ. ಬ್ಯಾಂಕಿನ ಅಭಿವೃದ್ಧಿ ಮತ್ತು ಬ್ಯಾಂಕಿನ ಸದಸ್ಯರಾದ ತಮ್ಮೆಲ್ಲರ ಸೇವೆ ಮಾಡುವ ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

| | | | |
|---|---|---|---|
| 7 | ಗುರುರಾಜ್ ಎನ್.ಎ. ಸಾಮಾನ್ಯ ವರ್ಗ | | |
| 14 | ಬೆಳ್ಳೂಡಿ ಮಂಜುನಾಥ್ ಹಿಂದುಳಿದ ವರ್ಗ/ಪ್ರವರ್ಗ ಬಿ. ಮೀಸಲು | | |

ಧನ್ಯವಾದಗಳೊಂದಿಗೆ,



ತಮ್ಮ ಸೇವಾಕಾಂಕ್ಷಿ : ಗುರುರಾಜ್ ಎನ್.ಎ.
(ನಾಗೂರು ಅಡಿವೆಪ್ಪನವರ ಮಗ)
ಎಪಿಎಂಸಿ ಮಾಜಿ ನಿರ್ದೇಶಕರು,
ಫೋ. : 93438 12345

ತಮ್ಮ ಸೇವಾಕಾಂಕ್ಷಿ : ಬೆಳ್ಳೂಡಿ ಮಂಜುನಾಥ್
(ಮುದ್ದಳ್ಳಿ ವೀರಣ್ಣನವರ ಮಗ)
ಫೋ. : 99722 85497

ಚುನಾವಣೆ ದಿನಾಂಕ : 11.02.2024, ಭಾನುವಾರ
ಸಮಯ : ಬೆ. 9 ರಿಂದ ಸಂಜೆ 4
ಸ್ಥಳ : ಮೋತಿ ವೀರಪ್ಪ ಕಾಲೇಜ್ ಆವರಣ, ದಾವಣಗೆರೆ.





**ದಿ ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಲಿ.,**
ಪ್ರಧಾನ ಕಛೇರಿ : ಪೋಸ್ಟ್ ಬಾಕ್ಸ್ ನಂ. 217, ಪಿ.ಬಿ. ರಸ್ತೆ, ದಾವಣಗೆರೆ-577 002.

ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಯಲ್ಲಿ ಮತ ಚಲಾಯಿಸಲು ಕಡ್ಡಾಯವಾಗಿ ಸದಸ್ಯರು ಗುರುತಿನ ಚೀಟಿ ತರಬೇಕಾಗಿದ್ದು, ಗುರುತಿನ ಚೀಟಿ ಪಡೆಯದೇ ಇರುವ ಸದಸ್ಯರು **ದಿನಾಂಕ : 10.02.2024 ರ ಶನಿವಾರದಂದು ಬೆಳಿಗ್ಗೆ 10.00 ರಿಂದ ಸಂಜೆ 5.30ರವರೆಗೆ ಹಾಗೂ ದಿನಾಂಕ : 11.02.2024ರ ಭಾನುವಾರದಂದು ಬೆಳಿಗ್ಗೆ 8.30 ರಿಂದ ಸಂಜೆ 3.30ರವರೆಗೆ** ಬ್ಯಾಂಕಿನ **ಪಿ.ಜೆ. ಬಡಾವಣೆ ಶಾಖೆಗೆ** ಭೇಟಿ ನೀಡಿ ಗುರುತಿನ ಚೀಟಿ ಪಡೆಯಲು ಮಾನ್ಯ ಸದಸ್ಯರಲ್ಲಿ ಕೋರಿದೆ.

ಶ್ರೀ ಬಿ.ಎಸ್. ಮಲ್ಲೇಶ್
ಪ್ರಧಾನ ವ್ಯವಸ್ಥಾಪಕರು



**ದಿ ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಲಿ.,**
ಪ್ರಧಾನ ಕಛೇರಿ : ಪೋಸ್ಟ್ ಬಾಕ್ಸ್ ನಂ. 217, ಪಿ.ಬಿ. ರಸ್ತೆ, ದಾವಣಗೆರೆ-577 002.

**ಬ್ಯಾಂಕಿನ ಮಾನ್ಯ ಸದಸ್ಯರ ಗಮನಕ್ಕೆ**

ಈಗಾಗಲೇ ಅರ್ಹತೆ ಹೊಂದಿರುವ ಬ್ಯಾಂಕಿನ 6010 ಸದಸ್ಯರ ಜೊತೆಗೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇವರ **'ರಿಟ್ ಪಿಟಿಷನ್ ನಂ.2818/2024'** ರ ದಿನಾಂಕ : **09.02.2024** ರ ಆದೇಶದನ್ವಯ ಸುಸ್ತಿದಾರ ಸದಸ್ಯರನ್ನು ಹೊರತುಪಡಿಸಿ **ಅನರ್ಹ ಮತದಾರರ ಪಟ್ಟಿಯಲ್ಲಿರುವ ಬ್ಯಾಂಕಿನ 6193 ಸದಸ್ಯರಿಗೆ ದಿನಾಂಕ : 11.02.2024ರ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಯಲ್ಲಿ ಮತದಾನ ಮಾಡಲು ಷರತ್ತುಗಳಿಗೊಳಪಟ್ಟು ಅವಕಾಶ ಕಲ್ಪಸಿರುವುದರಿಂದ** ಸದರಿ ಆದೇಶಕ್ಕೆ ಒಳಪಟ್ಟು **ದಿನಾಂಕ : 11.02.2024ರ ಭಾನುವಾರದಂದು ಬೆಳಿಗ್ಗೆ 9.00 ಘಂಟೆಯಿಂದ ಸಂಜೆ 4.00 ಘಂಟೆಯವರೆಗೆ ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜು, ಗುಂಡಿ ಸರ್ಕಲ್, ಹತ್ತಿರ, ದಾವಣಗೆರೆಯಲ್ಲಿ** ನಡೆಯುವ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಯಲ್ಲಿ ಮಾನ್ಯ ಸದಸ್ಯರು ಮತದಾನದ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕೆಂದು ಕೋರಲಾಗಿದೆ.

ದಿನಾಂಕ : 09.02.2024
ಸ್ಥಳ : ದಾವಣಗೆರೆ

ಶ್ರೀ ಬಿ.ಎಸ್. ಮಲ್ಲೇಶ್
ಪ್ರಧಾನ ವ್ಯವಸ್ಥಾಪಕರು

ಶ್ರೀ ಎನ್.ಜಿ. ರುದ್ರಪ್ಪ
ರಿಟರ್ನಿಂಗ್ ಅಧಿಕಾರಿಗಳು
ದಿ ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ





# ಮೀಸಲಾತಿ ಹೆಚ್ಚಳ ಸಮರ್ಪಕವಾಗಿ ಅನುಷ್ಠಾನಗೊಂಡರೆ ಎಸ್ಸಿ-ಎಸ್ಟಿ ಸಮಾಜಕ್ಕೆ ಹೆಚ್ಚಿನ ಅನುಕೂಲ



## ವಾಲ್ಮೀಕಿ ಜಾತ್ರೆಯಲ್ಲಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಮತ

ಮಲೇಬೆನ್ನೂರು, ಫೆ.9- ಮೀಸಲಾತಿ ಹೆಚ್ಚಳ ಮಾಡುವ ಸಂದರ್ಭದಲ್ಲಿ ಕೆಲವರು ಜೇನುಗೂಡಿಗೆ ಕೈ ಹಾಕಬೇಡಿ ಎಂದು ಹೆದರಿಸಿದರು. ಆದರೆ, ನಾನು ಮಾತ್ರ ಅದ್ಯಾವುದಕ್ಕೂ ತಲೆಕೆಡಿಸಿಕೊಳ್ಳದೇ ಎಸ್ಸಿ-ಎಸ್ಟಿ ಮೀಸಲಾತಿಯನ್ನು ಹೆಚ್ಚಳ ಮಾಡಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಅವರು, ಶುಕ್ರವಾರ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಹಮ್ಮಿಕೊಂಡಿದ್ದ 6ನೇ ವರ್ಷದ ವಾಲ್ಮೀಕಿ ಜಾತ್ರಾ ಮಹೋತ್ಸವದ ಜನಜಾಗೃತಿ ಸಮಾವೇಶದಲ್ಲಿ ಸಾಹಿತಿ ಬಿ.ಎಲ್.ವೇಣು ಅವರಿಗೆ 'ಮದಕರಿ ನಾಯಕ' ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ನಾನು ಮೀಸಲಾತಿ ಹೆಚ್ಚಳ ಮಾಡಿದಾಗ ಕೆಲವರು ಟೀಕೆ ಮಾಡಿದರು. ಅದಕ್ಕೆ ನಾನು 'ನೋ ಕಾಮೆಂಟ್' ಎಂಬ ಉತ್ತರ ಕೊಟ್ಟಿದ್ದೇನೆ. ವಾಲ್ಮೀಕಿ ಶ್ರೀಗಳ ಸಾಮಾಜಿಕ ಬದ್ಧತೆಗೆ ತಲೆಬಾಗಿ ಮೀಸಲಾತಿ ಹೆಚ್ಚಳ ಮಾಡಿದ್ದೇವೆ. ಈ ಬಗ್ಗೆ ನಮಗೆ ಆತ್ಮತೃಪ್ತಿ ಇದೆ. ಮೀಸಲಾತಿ ಹೆಚ್ಚಳದ ಪರಿಣಾಮವಾಗಿ ನಿಮಗೆ 3 ಸಾವಿರಕ್ಕೂ ಹೆಚ್ಚು ಇಂಜಿನಿಯರ್ ಸೀಟು ಮತ್ತು 400 ಮೆಡಿಕಲ್ ಸೀಟು ಹೆಚ್ಚಳವಾಗಿವೆ. ಇಷ್ಟೇ ಅಲ್ಲ, ಉದ್ಯೋಗದಲ್ಲಿ ಮತ್ತು ಪದೋನ್ನೋತಿಯಲ್ಲೂ ಮೀಸಲಾತಿ ಹೆಚ್ಚಳ ಲಾಭ ನಿಮಗೆ ಸಿಗಲಿದೆ. ನಾವು ಮಾಡಿದ್ದನ್ನು ಈಗಿನ ಸರ್ಕಾರ ಸರಿಯಾಗಿ ಅನುಷ್ಠಾನಗೊಳಿಸಿದರೆ, ಇನ್ನೂ ಹೆಚ್ಚಿನ ಸೌಲಭ್ಯಗಳು ನಿಮಗೆ ಸಿಗಲಿವೆ ಎಂದು ಬಸವರಾಜ್ ಬೊಮ್ಮಾಯಿ ತಿಳಿಸಿದರು.

ವಾಲ್ಮೀಕಿಯ ಜ್ಞಾನದ ಸಾಮರ್ಥ್ಯ, ಏಕಲವ್ಯನ ಏಕಾಗ್ರತೆಯ ಸಾಮರ್ಥ್ಯ, ಬೇಡರ ಕಣ್ಣಪ್ಪನ ಭಕ್ತಿಯ ಸಾಮರ್ಥ್ಯ, ಮದಕರಿ ನಾಯಕ ಮತ್ತು ಸುರಪುರ ನಾಯಕರ ಹಾಗೂ ಹಲಗಲಿ ಬೇಡರ ದೇಶಾಭಿಮಾನದ ಸಾಮರ್ಥ್ಯ ಈ ಕುಲದ ನೈಜವಾದ ಗುಣಲಕ್ಷಣಗಳಾಗಿದ್ದು, ಈ ಸಮಾಜವನ್ನು ಅಂದಿನ ರಾಮಕೃಷ್ಣ ಹೆಗಡೆ ಸರ್ಕಾರ ಎಸ್ಟಿಗೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ಕೇಂದ್ರದಲ್ಲಿ ಆಗಿನ ಪ್ರಧಾನಿ ಚಂದ್ರಶೇಖರ್ ಅವರು ಗೆಜೆಟ್ ಮಾಡಿದರು. ಗೆಜೆಟ್ ಮಾಡಲು ಒತ್ತಡ ಹಾಕಿದವರು ಹೆಚ್.ಡಿ.ದೇವೆಗೌಡರು ಎಂಬುದನ್ನು ಯಾರೂ ಮರೆಯಬಾರದೆಂದು ಬೊಮ್ಮಾಯಿ ಹೇಳಿದರು.

ಮೀಸಲಾತಿ ಹೆಚ್ಚಳವನ್ನು 9 ಷೆಡ್ಯೂಲ್‌ಗೆ ಸೇರಿಸುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಡ ಹಾಕುತ್ತೇವೆ ಮತ್ತು ಅಯೋಧ್ಯೆಯಲ್ಲಿ ರಾಮಮಂದಿರದ ಬಳಿ ವಾಲ್ಮೀಕಿ ಅವರ ಭವ್ಯ ಮಂದಿರದ ಜೊತೆಗೆ ವಾಲ್ಮೀಕಿ ಅವರ ಸೂತ್ರಗಳನ್ನು ಕೆತ್ತನೆ ಮಾಡಿಸುವ ಇಂಗಿತವನ್ನು ಪ್ರಧಾನಿ ನರೇಂದ್ರ ಮೋದಿ ವ್ಯಕ್ತಪಡಿಸಿದ್ದಾರೆಂದು ಬೊಮ್ಮಾಯಿ ಹೇಳಿದರು.

**ಅಯೋಧ್ಯೆಯಲ್ಲಿ ವಾಲ್ಮೀಕಿ ಮಂದಿರ ನಿರ್ಮಾಣ ಆಗಲೇಬೇಕು : ಆರ್.ಅಶೋಕ್**

**ನಾವು ಸೋತಿರಬಹುದು, ಆದರೆ, ಮೀಸಲಾತಿ ಹೆಚ್ಚಳ ಮಾಡಿದ ತೃಪ್ತಿ ನಮಗಿದೆ : ರಾಜೂಗೌಡ**

ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಮಾತನಾಡಿ, ವಾಲ್ಮೀಕಿ ಅವರಿಂದಾಗಿ ಶ್ರೀರಾಮ ಮನೆ ಮನೆಗೆ ಪರಿಚಯವಾಗಿದ್ದು, ಅವರ ಹೆಸರಿನ ಈ ಜಾತ್ರೆ ಅತ್ಯಂತ ಶ್ರೇಷ್ಠವಾಗಿದೆ. ಅಯೋಧ್ಯೆಯಲ್ಲಿ ವಾಲ್ಮೀಕಿ ಮಂದಿರ ನಿರ್ಮಾಣ ಆಗಲೇಬೇಕು. ಆಗೇ ಆಗುತ್ತೆ ಎಂದಾಗ ಸಮಾವೇಶದಲ್ಲಿ ಚಪ್ಪಾಳೆ ಕೇಳಿಬಂದವು.

ಮಾಜಿ ಸಚಿವ ರಾಜೂಗೌಡ ಮಾತನಾಡಿ, ನಾವು ಚುನಾವಣೆಯಲ್ಲಿ ಸೋತಿರಬಹುದು. ಆದರೆ, ನಮ್ಮ ಸಮಾಜಕ್ಕೆ ಮೀಸಲಾತಿ ಹೆಚ್ಚಳ ಮಾಡಿದ ತೃಪ್ತಿ ನಮಗಿದೆ. ಎಸ್ಟಿ ಮೀಸಲಾತಿಯನ್ನು ಶೇ.3 ರಿಂದ ಶೇ.7ಕ್ಕೆ ಹೆಚ್ಚಳ ಮಾಡಿದ ಕೀರ್ತಿ ಬಸವರಾಜ ಬೊಮ್ಮಾಯಿ ಅವರಿಗೆ ಸಲ್ಲುತ್ತದೆ. ಭೂಮಿ ಇರುವವರಿಗೂ ಈ ಸಮಾಜ ನಿಮ್ಮ ಕೊಡಗೆಯನ್ನು ಮರೆಯಲ್ಲ ಎಂದು ಬೊಮ್ಮಾಯಿ ಅವರಿಗೆ ಕೈ ಮುಗಿದು ಕೃತಜ್ಞತೆ ಸಲ್ಲಿಸಿದರು.

ಮೀಸಲಾತಿ ಹೆಚ್ಚಳದಿಂದಾಗಿ ನಮ್ಮ ಸಮಾಜದ ಅಧಿಕಾರಿಗಳ ಪ್ರಮೋಷನ್ ಅನ್ನು ಈ ಸರ್ಕಾರ ತಡೆ ಹಿಡಿದಿದ್ದು, ಅದನ್ನು ಸತೀಶ್ ಜಾರಕಿಹೊಳಿ ಅವರು ತಡೆಯನ್ನು ತೆರವು ಮಾಡಿಸಬೇಕೆಂದು ರಾಜೂಗೌಡ ಹೇಳಿದರು.


ವಾಲ್ಮೀಕಿ ಜಯಂತಿಗೆ ಸರ್ಕಾರದ ಮಾನ್ಯತೆ ನೀಡಿ ರಜೆ ಘೋಷಣೆ ಮಾಡಿದ ಯಡಿಯೂರಪ್ಪ ಅವರನ್ನೂ ಈ ಸಮಾಜ ಮರೆಯಬಾರದೆಂದರು.

ಸಂಸದ ಜಿ.ಎಂ.ಸಿದ್ದೇಶ್ವರ, ಶಾಸಕ ಬಿ.ಪಿ.ಹರೀಶ್, ಮಾಜಿ ಶಾಸಕ ಮಾಡಾಳು ವಿರೂಪಾಕ್ಷಪ್ಪ ಮಾತನಾಡಿದರು.

ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ, ಮಾಜಿ ಶಾಸಕರಾದ ಪ್ರತಾಪ್‌ಗೌಡ ಪಾಟೀಲ್, ಗಂಗಾಧರ ನಾಯಕ, ಮಾನಪ್ಪ ವಜ್ಜಾಲ್, ಬಿಜೆಪಿ ಎಸ್ಟಿ ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರ ಹನುಮಂತು, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಹನಗವಾಡಿ ವೀರೇಶ್, ಶ್ರೀನಿವಾಸ್ ದಾಸಕರಿಯಪ್ಪ, ಚಂದ್ರಶೇಖರ್ ಪೂಜಾರ್, ತ್ಯಾವಣಿಗಿ ಕೃಷ್ಣಮೂರ್ತಿ, ಸಾಲಕಟ್ಟೆ ಸಿದ್ದಪ್ಪ, ಕೆ.ಬೇವಿನಹಳ್ಳಿ ಹಾಲೇಶ್ ಮತ್ತಿತರರು ಈ ವೇಳೆ ಹಾಜರಿದ್ದರು.

ಜಾತ್ರಾ ಸಮಿತಿ ಸಂಚಾಲಕ ಬಿ.ಶಿವಪ್ಪ ಮನವಿ ಪತ್ರ ಓದಿದರು. ಟಿ.ಈಶ್ವರ್ ಸ್ವಾಗತಿಸಿದರು.

## ರಾಣೇಬೆನ್ನೂರಿನಲ್ಲಿ ಇಂದು ಅಂಬಿಗರ ಚೌಡಯ್ಯ ಜಯಂತಿ



ರಾಣೇಬೆನ್ನೂರು ತಾಲ್ಲೂಕು ಗಂಗಾಮತ ಸಂಘದಿಂದ ಶರಣ ಅಂಬಿಗರ ಚೌಡಯ್ಯ ಜಯಂತಿಯನ್ನು ವರ್ತಕರ ಸಂಘದ ಸಮುದಾಯ ಭವನದಲ್ಲಿ ಇಂದು ಅಂಬಿಗರ ಚೌಡಯ್ಯ ಪೀಠದ ಜಗದ್ಗುರು ಶಾಂತಭೀಷ್ಮ ಚೌಡಯ್ಯ ಶ್ರೀಗಳ ಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿದೆ ಎಂದು ಅಧ್ಯಕ್ಷ ರಾಜು ಜಾಡಮಾಲಿ ತಿಳಿಸಿದ್ದಾರೆ.

ಶಾಸಕ ಪ್ರಕಾಶ ಕೋಳಿವಾಡ, ಮಾಜಿ ಶಾಸಕ ಅರುಣಕುಮಾರ ಪೂಜಾರ, ಸಮಾಜದ ಮುಖಂಡರಾದ ಮಂಜುನಾಥ ಪುಟಗನಾಳ, ರಾಮಚಂದ್ರ ಐರಣಿ, ಡಾ. ನಾಗರಾಜ ದೊಡ್ಡಮನಿ, ಮಂಜುನಾಥ ಭೋವಿ, ಚಂದ್ರಶೇಖರ್ ಜಾಡರ, ಮಂಜುನಾಥ ಕುಂಬಳೂರ ಮತ್ತಿತರರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಸುಣಗಾರ ಓಣಿಯ ಗಂಗಾಪರಮೇಶ್ವರಿ ದೇವಸ್ಥಾನದಿಂದ ಶರಣ ಚೌಡಯ್ಯ ಭಾವಚಿತ್ರದ ಮೆರವಣಿಗೆ ನಡೆಯಲಿದೆ.

## ನಗರದಲ್ಲಿ ಇಂದು ಬಿ.ಟಿ. ಜಾಹ್ನವಿ ಅವರ ಹೊಸ ಕಥಾ ಸಂಕಲನ ಬಿಡುಗಡೆ



ಕತೆಗಾರ್ತಿ ಶ್ರೀಮತಿ ಬಿ.ಟಿ. ಜಾಹ್ನವಿ ಅವರ ಹೊಸ ಕಥಾ ಸಂಕಲನ 'ಒಬ್ರು ಸುದ್ಯಾಕೆ ಒಬ್ರು ಗದ್ಲಾಕೆ' ಪುಸ್ತಕದ ಬಿಡುಗಡೆ ಸಮಾರಂಭವು ಇಂದು ಬೆಳಿಗ್ಗೆ 10.30ಕ್ಕೆ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ.

ಹಿರಿಯ ಪತ್ರಕರ್ತ ಜಿ.ಪಿ. ಬಸವರಾಜು ಪುಸ್ತಕ ಬಿಡುಗಡೆ ಮಾಡಲಿರುವ ಸಮಾರಂಭದ ಅಧ್ಯಕ್ಷತೆಯನ್ನು ಮಾನವ ಬಂಧುತ್ವ ವೇದಿಕೆ ಕರ್ನಾಟಕ ಸಂಚಾಲಕ ಪ್ರೊ. ಎ.ಬಿ. ರಾಮಚಂದ್ರಪ್ಪ ವಹಿಸಲಿದ್ದು, ಲೇಖಕ ಡಾ. ರವಿಕುಮಾರ ನೀಹ, ಲೇಖಕಿ ವಿಮರ್ಶಕಿ ಸೌಮ್ಯ ಕೋಡೂರು, ಸಾಹಿತಿ ಡಾ. ಮಮತಾ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಬಿ.ಟಿ. ಜಾಹ್ನವಿಯವರ ಕಥೆಯನ್ನು ಆಧರಿಸಿದ 'ದೂಪ್ಪಳ್ಳಿ ಸೆಕ್ಸಿ ದುರುಗ' ರಂಗ ಪ್ರಸ್ತುತಿಯನ್ನು ಹೆಗ್ಗೋಡಿನ ಕೆ.ವಿ ಅಕ್ಷರ ಅವರ ಮಾರ್ಗದರ್ಶನದಲ್ಲಿ ಕಲಾವಿದರಾದ ವಿದ್ಯಾ ಅಕ್ಷರ ಮತ್ತು ವಾಣಿ ಸತೀಶ್ ಅವರು ನಡೆಸಿಕೊಡಲಿದ್ದಾರೆ.

## ನಗರದಲ್ಲಿ ಇಂದು ರಾಜ್ಯ ಸಂಘಟನಾ ಸಭೆ

ಸಾರ್ವಜನಿಕ ಶಿಕ್ಷಣ ಇಲಾಖೆಯ ಲಿಪಿಕ ನೌಕರರ, ವಾಹನ ಚಾಲಕರ ಮತ್ತು ಡಿ. ಗ್ರೂಪ್ ನೌಕರರ ಸಂಘದ ರಾಜ್ಯ ಸಂಘಟನಾ ಸಭೆಯು ಇಂದು ಬೆಳಿಗ್ಗೆ 11 ಗಂಟೆಗೆ ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ ನಡೆಯಲಿದೆ.




**12ನೇ ಪುಣ್ಯಸ್ಮರಣೆ**

ನೀವು ನಮ್ಮನ್ನಗಲಿ ಇಂದಿಗೆ 12 ವರ್ಷಗಳಾದವು.
ಸದಾ ನಿಮ್ಮ ಸವಿನೆನಪಿನಲ್ಲಿರುವ,

ತಾಯಿ : **ಶ್ರೀಮತಿ ನಿರ್ಮಲ ಶೇಖರಪ್ಪ**

ಪತ್ನಿ : **ಶ್ರೀಮತಿ ಅಕ್ಕಮಹಾದೇವಿ ಶಿವಕುಮಾರ್**
ಮಾಜಿ ಅಧ್ಯಕ್ಷರು, ಹಾಲಿ ಸದಸ್ಯರು ಗ್ರಾ. ಪಂ. ನೇರ್ಲಿಗೆ.

ಮಕ್ಕಳು : **ಶ್ರೀಮತಿ ಕಾವ್ಯ ನಾಗರಾಜ್, ಕಲ್ಲೇಶ್ ಗೌಡ ಮತ್ತು ಗೌಡ್ರು ವಂಶಸ್ಥರು, ಸುಲ್ತಾನಿಪುರ.**

**ದಿ|| ಗೌಡ್ರು ಶಿವಕುಮಾರ್**

**ಮೊ. 98809-66750, 95358-65410**


# ಮಾತೃಭಾಷೆ ಜೊತೆಗೆ ಇಂಗ್ಲಿಷ್ ಇದ್ದರೆ ಯಶಸ್ಸು

**ರಾಣೇಬೆನ್ನೂರು ಶಾಸಕ ಕೋಳಿವಾಡ**



ರಾಣೇಬೆನ್ನೂರು,ಫೆ.9- ಮಾತೃ ಭಾಷೆ ಜೊತೆಗೆ ಇಂಗ್ಲಿಷ್ ಭಾಷೆ ಕರಗತ ಮಾಡಿಕೊಂಡಾಗ ಉನ್ನತ ಅಭ್ಯಾಸದಲ್ಲಿ ಯಶಸ್ಸು ಗಳಿಸಬಹುದು ಎಂದು ಶಾಸಕ ಪ್ರಕಾಶ ಕೋಳಿವಾಡ ಹೇಳಿದರು.

ಇಲ್ಲಿನ ವಾಗೀಶ ನಗರದ ಕೆ.ಬಿ. ಕೋಳಿವಾಡ ಸಭಾಭವನದಲ್ಲಿ ಬೆಂಗಳೂರಿನ ಬಿ.ಅರಸೋಜಿರಾವ್ ಧರ್ಮ ಸಂಸ್ಥೆ ವತಿಯಿಂದ ಮರಾಠ ಸಮಾಜದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಕೊಡಮಾಡುವ ವಿದ್ಯಾರ್ಥಿ ವೇತನ ವಿತರಿಸಿ ಅವರು ಮಾತನಾಡಿದರು. ನಮ್ಮ ಪಿಕೆಕೆ ಸಂಸ್ಥೆ ವತಿಯಿಂದ ಈಗಾಗಲೇ ಸಾಕಷ್ಟು ವಿದ್ಯಾರ್ಥಿಗಳಿಗೆ ಸ್ಪೋಕನ್ ಇಂಗ್ಲಿಷ್ ತರಬೇತಿಯನ್ನು ಉಚಿತವಾಗಿ ನೀಡುತ್ತಿದ್ದು, ಪದವೀಧರ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ. ಇದೇ ರೀತಿ ಬಿ.ಅರಸೋಜಿರಾವ್ ಸಂಸ್ಥೆ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನೀಯವಾಗಿದೆ. ಇದೇ ರೀತಿ ನಿರಂತರ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಲಿ ಎಂದರು.

ಸಂಸ್ಥೆ ಅಧ್ಯಕ್ಷ ಡಾ.ಜಿವೋಜಿರಾವ್ ಮಾತನಾಡಿ, ನಮ್ಮ ಸಂಸ್ಥೆ ಸಂಸ್ಥಾಪಕರು ಅವಿದ್ಯಾವಂತರಾಗಿದ್ದರು. ಹುಟ್ಟೂರು ಬಿಟ್ಟು ಬೆಂಗಳೂರಿಗೆ ಬಂದು ಕಷ್ಟ ಪಟ್ಟು ದುಡಿದು ಕಲ್ಯಾಣ ಮಂಟಪ ಹಾಗೂ ವಾಣಿಜ್ಯ ಮಳಿಗೆ ಕಟ್ಟಿ ಅದರಿಂದ ಬಂದ ಹಣವನ್ನು ಮರಾಠ ಸಮಾಜದ ವಿದ್ಯಾರ್ಥಿಗಳ ಏಳಿಗೆಗೆ ವಿನಿಯೋಗ ಮಾಡುತ್ತಾ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ತಾಲ್ಲೂಕಿನ ಮರಾಠ ಸಮಾಜದ ವಿದ್ಯಾರ್ಥಿಗಳಿಗೆ 2 ಲಕ್ಷದವರಿಗೂ ವಿದ್ಯಾರ್ಥಿ ವೇತನ ನೀಡಲಾಗಿದೆ ಎಂದರು.

ಜಿ.ಎಚ್.ಮರಿಯೋಜಿರಾವ್, ಪ್ರಕಾಶ ಮಂಜೂಚಿ, ನಾಗರಾಜ ಮಾಕನೂರು, ಗ್ರಾಪಂ ಅಧ್ಯಕ್ಷ ರಾಜು ಹಲವಾಗಲ, ಏಕನಾಥ ಮುದಿಗೌಡ್ರ ಸೇರಿದಂತೆ ಮತ್ತಿತರು ಇದ್ದರು.

## ನಗರದಲ್ಲಿ ಇಂದು - ನಾಳೆ 'ಕರಿನೀರ ವೀರ' ನಾಟಕ ಪ್ರದರ್ಶನ

ದಾವಣಗೆರೆ, ಫೆ. 9- ರಂಗಭೂಮಿ ಟ್ರಸ್ಟ್ ಕೊಡಗು, ಪ್ರೇರಣಾ ಯುವ ಸಂಸ್ಥೆ ಸಹಯೋಗದಲ್ಲಿ ನಾಳೆ ದಿನಾಂಕ 10 ಮತ್ತು 11 ರಂದು ಸಂಜೆ 6 ಗಂಟೆಗೆ ಎರಡು ದಿನಗಳ ಕಾಲ ಸ್ವಾತಂತ್ರ್ಯ ಹೋರಾಟಗಾರ ವೀರ ಸಾವರ್ಕರ್ ಬದುಕಿನ ಕಥಾನಕ 'ಕರಿನೀರ ವೀರ' ನಾಟಕ ಪ್ರದರ್ಶನವನ್ನು ಪದ್ಮಶ್ರೀ ಚಿಂದೋಡಿ ಲೀಲಾ ಕಲಾ ಕ್ಷೇತ್ರದಲ್ಲಿ ಆಯೋಜಿಸಲಾಗಿದೆ ಎಂದು ಪ್ರೇರಣಾ ಯುವ ಸಂಸ್ಥೆ ಅಧ್ಯಕ್ಷ ಎಸ್.ಟಿ. ವೀರೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಡ್ಡಂಡ ಕಾರ್ಯಪ್ಪ ರಚನೆ, ಪರಿಕಲ್ಪನೆ, ವಿನ್ಯಾಸ ಹಾಗೂ ನಿರ್ದೇಶನದಲ್ಲಿ ನಾಟಕ ಪ್ರದರ್ಶನಗೊಳ್ಳಲಿದೆ. ಸುಬ್ರಹ್ಮಣ್ಯ ಮೈಸೂರು ಹಾಗೂ ಗಜಾನನ ನಾಯ್ಕ ಸಂಗೀತ ನೀಡಿದ್ದಾರೆ. ಅನಿತಾ ಕಾರ್ಯಪ್ಪ ವಸ್ತ್ರವಿನ್ಯಾಸ ಮಾಡಿದ್ದು, ಮಂಜುನಾಥ ಶಿಲ್ಪಿ ಅವರ ರಂಗ ಸಹಕಾರವಿದೆ ಎಂದು ಹೇಳಿದರು.

ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರ ಸಾವರ್ಕರ್ ಅವರ ಸಾಹಸಗಳನ್ನು ಜನರಿಗೆ ತಲುಪಿಸುವ ಉದ್ದೇಶದಿಂದ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಎರಡು ಗಂಟೆಗಳ ನಾಟಕ ಪ್ರದರ್ಶನಗೊಳ್ಳಲಿದೆ ಎಂದರು.

ಈಗಾಗಲೇ ಮೈಸೂರು, ಶಿವಮೊಗ್ಗ, ಶಿಕಾರಿಪುರ, ಹುಬ್ಬಳ್ಳಿ, ಧಾರವಾಡದಲ್ಲಿ ನಾಟಕ ಪ್ರದರ್ಶನ ಕಾಣಲಿದೆ. ಇತ್ತೀಚಿನ ದಿನಗಳಲ್ಲಿ ರಂಗಭೂಮಿ ಚಟುವಟಿಕೆಗಳು ಕ್ಷೀಣಿಸುತ್ತಿವೆ. ಒಂದು ಕಾಲದಲ್ಲಿ ದಾವಣಗೆರೆಯ ರಂಗಭೂಮಿಯ ತವರುಮನೆಯಾಗಿತ್ತು. ವರ್ಷವಿಡೀ ನಾಟಕ ಪ್ರದರ್ಶನಗಳು ನಡೆಯುತ್ತಿದ್ದವು. ಆದರೀಗ ಅವುಗಳು ಕಡಿಮೆಯಾಗುತ್ತಿವೆ ಎಂದು ಮಾಹಿತಿ ನೀಡಿದರು.

ಫೆ. 10 ಮತ್ತು 11 ರಂದು ಎರಡು ದಿನಗಳ ನಾಟಕ ಪ್ರದರ್ಶನಕ್ಕೆ ರಂಗಕರ್ಮಿ ಚಿಂದೋಡಿ ಚಂದ್ರಧರ ಚಾಲನೆ ನೀಡಲಿದ್ದಾರೆ. 100 ಟಿಕೆಟ್ ದರ ನಿಗದಿ ಮಾಡಲಾಗಿದೆ. ಆಸಕ್ತರು 9844422677, 9945977433 ಗೆ ಸಂಪರ್ಕಿಸಿ ಟಿಕೆಟ್ ಪಡೆಯಬಹುದು.

ಪತ್ರಿಕಾಗೋಷ್ಠಿಯಲ್ಲಿ ಮಹಾನಗರ ಪಾಲಿಕೆ ವಿಪಕ್ಷ ನಾಯಕ ಕೆ. ಪ್ರಸನ್ನಕುಮಾರ್, ಸದಸ್ಯ ಶಿವಾನಂದ್, ಪ್ರೇರಣಾ ಯುವ ಸಂಸ್ಥೆಯ ನಿರ್ದೇಶಕ ಅಶೋಕ್, ಸಚ್ಚಿನ್ ವೆರ್ಣೇಕರ್ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಶಿವಗೋಷ್ಠಿ

ಶಿವಗೋಷ್ಠಿ ಸಮಿತಿ, ಶ್ರೀ ಶಿವಕುಮಾರಸ್ವಾಮಿ ಮಹಾಮಂಟಪ, ಸಾದರ ನೌಕರರ ಬಳಗದ ಸಹಯೋಗದಲ್ಲಿ ಇಂದು ಸಂಜೆ 6.30 ಕ್ಕೆ ತರಳಬಾಳು ಬಡಾವಣೆಯ ಶ್ರೀ ಶಿವಕುಮಾರಸ್ವಾಮಿ ಮಹಾಮಂಟಪದ ಆವರಣದಲ್ಲಿ 'ಶಿವಗೋಷ್ಠಿ-302 ಹಾಗೂ ಸ್ಮರಣೆ- 76 ' ಮಾಸಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್ ಗೌರವ ಕಾರ್ಯದರ್ಶಿ ಎಂ.ಬಿ. ಸಂಗಮೇಶ್ವರಗೌಡ್ರು ಅಧ್ಯಕ್ಷತೆ ವಹಿಸುವರು. 'ಮಹಾ ಮಾನವತಾವಾದಿ ಬಸವಣ್ಣನವರು' ಕುರಿತು ಮುಖ್ಯೋಪಾಧ್ಯಾಯ ದಾಗಿನಕಟ್ಟೆ ಪರಮೇಶ್ವರಪ್ಪ ಉಪನ್ಯಾಸ ನೀಡಲಿದ್ದಾರೆ.

ಕೂಲಂಬಿಯ ನಿವೃತ್ತ ಮುಖ್ಯಶಿಕ್ಷಕ ಲಿಂ. ಎಸ್.ಎಂ. ಶಿವಾನಂದಯ್ಯ ಅವರ ಸ್ಮರಣೆಯನ್ನು ಹೂವಿನಮಡು ಬ್ಯಾಂಕ್ ನಿವೃತ್ತ ಅಧಿಕಾರಿ ಹೆಚ್. ಬಿ. ಜಯಪ್ಪ ಮಾಡಲಿದ್ದಾರೆ. ಕದಳಿ ಮಹಿಳಾ ವೇದಿಕೆಯ ಸದಸ್ಯರಿಂದ ವಚನ ಗಾಯನ ನಡೆಯಲಿದೆ.

## ಹೊಸನಾಯಕನಹಳ್ಳಿ ಚಂದ್ರಗಿರಿ ಮಠದಲ್ಲಿ ಇಂದಿನಿಂದ ಸಪ್ತಾಹ

ದಾವಣಗೆರೆ ತಾಲ್ಲೂಕು ಹದಡಿ-ಹೊಸನಾಯ್ಕನಹಳ್ಳಿ ಚಂದ್ರಗಿರಿ ಮಠದಲ್ಲಿ 69 ನೇ ವರ್ಷದ ಸಪ್ತಾಹ, ಪುಣ್ಯಾರಾಧನೆ, ರಥೋತ್ಸವ ಕಾರ್ಯಕ್ರಮಗಳು ಇಂದಿನಿಂದ ಇದೇ ದಿನಾಂಕ 16ರವರೆಗೆ ಜರುಗಲಿವೆ.

ಶ್ರೀಮಠದ ಸದ್ಗುರು ಪರಮಹಂಸ ಮುರಳೀಧರ ಸ್ವಾಮೀಜಿ ನೇತೃತ್ವದಲ್ಲಿ ಪ್ರತಿ ದಿನ ಭಜನೆ, ಪೂಜಾ ವಿಧಿ-ವಿಧಾನ, ಭಗವದ್ಗೀತಾ ಪಾರಾಯಣ, ಮಠಾಧೀಶರಿಂದ ಪ್ರವಚನ, ಗಣ್ಯರಿಗೆ ಸನ್ಮಾನ ಜರುಗಲಿದೆ.

ಇದೇ ದಿನಾಂಕ 16 ರಂದು ಬೆಳಿಗ್ಗೆ ಬ್ರಹ್ಮಲೀನ ಶ್ರೀ ವಿದ್ಯಾವರೇಣ್ಯ ಯೋಗೀಶ್ವರರ 19 ನೇ ವರ್ಷದ ಪುಣ್ಯರಾಧನಾ ಮಹೋತ್ಸವ, ನೂತನ ಶ್ರೀಗಳ 20 ನೇ ವರ್ಷದ ಪಟ್ಟಾಭಿಷೇಕ ಸಮಾರಂಭ ನಡೆಯಲಿದೆ. ಅಂದು ಮಧ್ಯಾಹ್ನ 12.30 ಕ್ಕೆ ಸರಳ ಸಾಮೂಹಿಕ ವಿವಾಹ, ಸಂಜೆ 4.30 ಕ್ಕೆ ಸದ್ಗುರಗಳ ರಥೋತ್ಸವ ಜರುಗಲಿದೆ.



## ನೀರು ಸರಬರಾಜಿನಲ್ಲಿ ವ್ಯತ್ಯಯ ಸಾರ್ವಜನಿಕರ ಪರದಾಟ

ಹರಿಹರ, ಫೆ,9- ನಗರದ ತುಂಗಭದ್ರಾ ನದಿಯಲ್ಲಿ ನೀರಿನ ಪ್ರಮಾಣ ಸಂಪೂರ್ಣ ಕಡಿಮೆ ಆಗಿದ್ದರಿಂದ ನಗರದಲ್ಲಿ ನಿನ್ನೆಯಿಂದ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿ ಸಾರ್ವಜನಿಕರು ಪರದಾಡುವಂತಾಗಿದೆ.

ಈ ವೇಳೆ ಜಲಸಿರಿ ಇಲಾಖೆಯ ಎಇಇ ನವೀನ್ ಕುಮಾರ್ ಮಾತನಾಡಿ, ನದಿಯಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದ್ದರಿಂದ, ಕವಲೆತ್ತು ಬಳಿ ಇರುವ 27 ಕೆರೆ ನೀರು ಸಂಗ್ರಹ ಕೇಂದ್ರದ ನೀರನ್ನು ಬಳಸಿಕೊಂಡು ಹಲವು ದಿನಗಳಿಂದ ನಗರದಲ್ಲಿ ನೀರು ಸರಬರಾಜು ಮಾಡಲಾಗುತ್ತಿತ್ತು. ಆದರೆ ನಿನ್ನೆ ಅಲ್ಲಿಂದಲೂ ನೀರು ಎತ್ತುವುದಕ್ಕೆ ಆಗದಷ್ಟು ನದಿಯಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದ್ದರಿಂದ ನಿನ್ನೆ ಸಂಜೆಯಿಂದ ನಗರದ ಜನತೆಗೆ ನೀರು ಸರಬರಾಜು ಮಾಡುವುದನ್ನು ಸ್ಥಗಿತಗೊಳಿಸಲಾಯಿತು ಎಂದು ತಿಳಿಸಿದರು.

ಇವತ್ತು ಜಾಕ್‌ವೆಲ್ ಹತ್ತಿರ ಜೆಸಿಬಿ ಯಂತ್ರದ ಮೂಲಕ ಗುಂಡಿ ತೆಗೆಸಿ ಆ ಮೂಲಕ ನೀರಿನ ಸಂಗ್ರಹಕ್ಕೆ ಮುಂದಾಗಿದ್ದು, ಇದರಿಂದಾಗಿ ನಗರದ ಜನತೆಗೆ ಕನಿಷ್ಠ ದಿನಕ್ಕೆ ಅರ್ಧ ಗಂಟೆಯವರೆಗೆ ನೀರು ಸರಬರಾಜು ಮಾಡುವುದಕ್ಕೆ ಅವಕಾಶ ಆಗುತ್ತದೆ ಎಂದರು.

ಇದೇ ದಿನಾಂಕ 5 ರಂದು ಡ್ಯಾಮ್ ನಿಂದ ಬಿಟ್ಟಿರುವ ನೀರು ಇನ್ನೂ ರಾಜನಹಳ್ಳಿ ಭಾಗಕ್ಕೆ ಬಂದಿದೆ. ಹರಿಹರ ನಗರಕ್ಕೆ ನಾಳೆ ಬರುವ ಸಾಧ್ಯತೆ ಇದ್ದು, ಬಂದ ತಕ್ಷಣವೇ ನಗರದ ಜನತೆಗೆ ಪೂರ್ಣ ಪ್ರಮಾಣದಲ್ಲಿ ನೀರು ಸರಬರಾಜು ಮಾಡಲಾಗುವುದು ಎಂದು ಹೇಳಿದರು.

## ಗುತ್ತೂರು ಪಿಎಸ್‌ಐ ಆಗಿ ಮಂಜುನಾಥ್ ಕುಪ್ಪೇಲೂರು ಅಧಿಕಾರ ಸ್ವೀಕಾರ



ಹರಿಹರ, ಫೆ. 8- ನಗರದ ಹೊರವಲಯದ ಗುತ್ತೂರು ಪೊಲೀಸ್ ಠಾಣೆಯಲ್ಲಿ ಪಿಎಸ್‌ಐಯಾಗಿದ್ದ ಅರವಿಂದ್ ಅವರು ಬ್ಯಾಡಗಿ ನಗರಕ್ಕೆ ವರ್ಗಾವಣೆಯಾಗಿದ್ದು, ಅವರ ಜಾಗಕ್ಕೆ ನೂತನ ಪಿಎಸ್‌ಐಯಾಗಿ ಮಂಜುನಾಥ್ ಕುಪ್ಪೇಲೂರು ಇಂದು ಅಧಿಕಾರ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿಗಳಾದ ನಿಂಗಪ್ಪ, ಕರಿಯಪ್ಪ, ಸುಶೀಲಮ್ಮ, ಕುಮಾರ್ ಇತರರು ಹಾಜರಿದ್ದರು.


**ಸವಿನೆನಪು**



**ದಿ. ಶ್ರೀ ಎ.ಎಂ. ಆನಂದ ಕುಮಾರ್**

ಹಿರಿಯ ಕಲಾವಿದರು ಮತ್ತು ಸಂಸ್ಥಾಪಕರು, ಭಾರತಿ ವಾದ್ಯ ವೃಂದ

ನಿಧನ : 10.02.2015

**ನೀವು ನಮ್ಮನ್ನಗಲಿ ಇಂದಿಗೆ ಒಂಭತ್ತು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ ಮತ್ತು ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.**

ಪತ್ನಿ : ✦ **ಶ್ರೀಮತಿ ಮೀನಾ ಆನಂದ ಕುಮಾರ್** ಪುತ್ರ : ✦ **ಎ.ಎಂ. ಸಚಿನ್ ಮತ್ತು ಶ್ರೀಮತಿ ಸೋನಿ**

ಪುತ್ರಿ : ✦ **ಶ್ರೀಮತಿ ರೇಖಾ ಎ.ನಾಗರಾಜ್,** ಮಾಜಿ ಮಹಾಪೌರರು, ಮಹಾನಗರ ಪಾಲಿಕೆ

ಅಳಿಯ : ✦ **ಎ. ನಾಗರಾಜ್,** ಮಾಜಿ ವಿರೋಧ ಪಕ್ಷದ ನಾಯಕರು, ಮಹಾನಗರ ಪಾಲಿಕೆ ಸದಸ್ಯರು, ದಾವಣಗೆರೆ

ಪುತ್ರಿ : ✦ **ಶ್ರೀಮತಿ ವೀಣಾ ನಾದನ್**

ಮೊಮ್ಮಕ್ಕಳು : ✦ **ಶ್ರೀಮತಿ ರೀಮಾ ವೀರೇಶ್** ✦ **ಚಿ. ಸಿ.ಎನ್. ರೂಪಿತ್** ✦ **ಕು. ನೇಹ** ✦ **ಚಿ. ನಿಖಿಲ್** ✦ **ಚಿ. ಸೋಹನ್** ✦ **ಕು. ಸೋನಲ್ ಹಾಗೂ ಸಹೋದರರು ಮತ್ತು ಬಂಧು-ಮಿತ್ರರು.**


### ಸವಳಂಗ ನಾಗಲದಿನ್ನೆ ಲಕ್ಷ್ಮಮ್ಮ ನಿಧನ



ಉಪ್ಪಲ ಕರಿಯಪ್ಪನವರ ಸಣ್ಣ ಮಗಳು ಸವಳಂಗ ನಾಗಲದಿನ್ನೆ ದಿ|| ಸಣ್ಣ ಶಂಕರಪ್ಪ ನವರ ಧರ್ಮಪತ್ನಿ ಲಕ್ಷ್ಮಮ್ಮ (90) ಇವರು ದಿನಾಂಕ 09-02-2024 ಶುಕ್ರವಾರ ರಾತ್ರಿ 7.46ಕ್ಕೆ ದಾವಣಗೆರೆಯ ದೇವರಾಜ್ ಅರಸು ಬಡಾವಣೆ 'ಸಿ' ಬ್ಲಾಕ್, 3ನೇ ಮೇನ್ ನಾಲ್ಕನೇ ಕ್ರಾಸ್, ದಿ|| ಬಡಿಯಪ್ಪ ಉಪ್ಪಾಲ ಅವರ ಮಗಳು ನಿವೃತ್ತ ಅಂಗನವಾಡಿ ಟೀಚರ್ ಸರಸ್ವತಿ ಅವರ ನಿವಾಸದಲ್ಲಿ ನಿಧನರಾಗಿದ್ದಾರೆ. ಮೃತರು ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ದಿನಾಂಕ 10-02-2024ರ ಶನಿವಾರ ಮಧ್ಯಾಹ್ನ 12.30 ಗಂಟೆಗೆ ಬೂದಾಳು ರಸ್ತೆಯ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

### ಶ್ರೀಮತಿ ಶತಾಯುಷಿ ಹಾಲಮ್ಮ ನಿಧನ



ಬಿ.ಎ.ಜೆ.ಎಸ್.ಎಸ್. ಸಮೂಹ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿಗಳು ಹಾಗೂ ಕೆಪಿಸಿಸಿ ಪದವೀಧರ ರಾಜ್ಯ ಘಟಕದ ರಾಜ್ಯಾಧ್ಯಕ್ಷರಾದ ಡಾ. ಆರ್.ಎಂ. ಕುಬೇರಪ್ಪನವರ ತಾಯಿಯವರಾದ ಶತಾಯುಷಿ ಶ್ರೀಮತಿ ಹಾಲಮ್ಮ ಕೋಂ. ರಾಮಪ್ಪ ಮಲ್ಲಾಡದ ಇವರು ದಿನಾಂಕ 09.02.2024ರ ಸಂಜೆ 7ಗಂಟೆಗೆ ದೈವಾಧೀನರಾಗಿರುತ್ತಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 10.02.2024ರ ಶನಿವಾರ 2 ಗಂಟೆಗೆ ಕುಬೇರಪ್ಪನವರ ಸ್ವಗ್ರಾಮ ಹಿರೆಕೇರೂರು ತಾಲ್ಲೂಕಿನ ಹೊಸ ವೀರಾಪುರ ಗ್ರಾಮದಲ್ಲಿ ನೆರವೇರಲಿದೆ.

## ರೈಲ್ವೇ ನಿಲ್ದಾಣದಲ್ಲಿ ವಾರಸುದಾರರಿಲ್ಲದ 9 ಬೈಕ್‌ಗಳು ಪತ್ತೆ




ದಾವಣಗೆರೆ, ಫೆ.9- ನಗರದ ರೈಲ್ವೇ ನಿಲ್ದಾಣದ ಮುಂಭಾಗದ ಪಾರ್ಕಿಂಗ್ ಸ್ಥಳದಲ್ಲಿ ವಾರಸುದಾರರಿಲ್ಲದ ವಿವಿಧ ಕಂಪನಿಗಳ ಬೈಕುಗಳು ಪತ್ತೆಯಾಗಿವೆ. ಇವುಗಳ ಮೊತ್ತ 3.70 ಲಕ್ಷ ರೂ ಎಂದು ಅಂದಾಜಿಸಲಾಗಿದೆ.

ಪಾರ್ಕಿಂಗ್ ಸ್ಥಳದಲ್ಲಿದ್ದ ಬೈಕುಗಳನ್ನು ಎಂಸಿಸಿಟಿಎನ್‌ಎಸ್ ತಂತ್ರಾಂಶದ ಮೂಲಕ ಪರಿಶೀಲಿಸಿ ವಿವಿಧ ಕಂಪನಿಗಳ 9 ಬೈಕುಗಳನ್ನು ಕಳ್ಳತನ ಮಾಡಿಕೊಂಡು ಬಂದು ಬಿಟ್ಟು ಹೋದಂತೆ ಕಂಡು ಬಂದಿದ್ದು, ವಾರಸುದಾರರು ಕಂಡುಬಾರದ ಕಾರಣ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ. ಈ ಬೈಕುಗಳ ಪೈಕಿ ಕೆಲವು ಬೈಕುಗಳು ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಕಳ್ಳತನವಾಗಿರುವ ಬಗ್ಗೆ ಪ್ರಕರಣಗಳು ದಾಖಲಾಗಿರುವುದು ತಿಳಿದು ಬಂದಿದೆ. ರೈಲ್ವೇ ಪೊಲೀಸ್ ಉಪ ಮಹಾ ನಿರೀಕ್ಷಕ ಡಾ.ಎಸ್.ಡಿ. ಶರಣಪ್ಪ, ಪೊಲೀಸ್ ಅಧೀಕ್ಷಕರಾದ ಡಾ. ಕೆ.ಎಸ್. ಸೌಮ್ಯಲತಾ ಅವರ ಮಾರ್ಗದರ್ಶನದಲ್ಲಿ ಬೆಂಗಳೂರು ರೈಲ್ವೇ ಉಪ ವಿಭಾಗದ ಪೊಲೀಸ್ ಉಪಾಧೀಕ್ಷಕ ರವಿಕುಮಾರ್ ನೇತೃತ್ವದಲ್ಲಿ ದಾವಣಗೆರೆ ರೈಲ್ವೇ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ಸಂತೋಷ್ ಎಂ.ಪಾಟೀಲ್ ಮುಂದಾಳತ್ವದಲ್ಲಿ ಎಎಸ್‌ಐ ನಾಗರಾಜ್, ಮುಖ್ಯ ಆರಕ್ಷಕರುಗಳಾದ ಶ್ರೀನಿವಾಸ್, ಟಿ.ಆರ್. ಚೇತನ್ ಈ ಪತ್ತೆ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

### ನಂದಿತಾವರೆ ಗ್ರಾಮದ ಕೆ.ಜಿ. ಬಸವಲಿಂಗಪ್ಪಗೌಡ್ರು ನಿಧನ



ಹರಿಹರ ತಾಲ್ಲೂಕು ನಂದಿತಾವರೆ ಗ್ರಾಮದ ಹಿರಿಯರಾದ

**ಕೆ.ಜಿ. ಬಸವಲಿಂಗಪ್ಪಗೌಡ್ರು** (95 ವರ್ಷ)

ಅವರು ದಿನಾಂಕ 09.02.2024ರ ಶುಕ್ರವಾರ ರಾತ್ರಿ 9.15ಕ್ಕೆ ನಿಧನರಾದರು. ಇಬ್ಬರು ಪುತ್ರರು, ಐವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10.02.2024ರ ಶನಿವಾರ ಮಧ್ಯಾಹ್ನ 1 ಗಂಟೆಗೆ ನಂದಿತಾವರೆ ಗ್ರಾಮದಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ**

**ಕೆ.ಜಿ. ಗದಿಗೆಪ್ಪ ಮತ್ತು ಕುಟುಂಬದವರು ನಂದಿತಾವರೆ ಹಾಗೂ ಬಂಧು-ಮಿತ್ರರು.**

## ಕೋಡಿ ಕ್ಯಾಂಪ್ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿಂದು ಪೂಜೆ, ದಾಸೋಹ

ದಾವಣಗೆರೆಯ ಕೊಟ್ಟೂರು ಶ್ರೀ ಗುರು ಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ವತಿಯಿಂದ ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ಇಂದು ಅವರಾತ್ರಿ ಅಮವಾಸ್ಯೆ ಪೂಜೆ ದಾಸೋಹ ಏರ್ಪಡಿಸಲಾಗಿದೆ.

ಇಂದು ಬೆಳಿಗ್ಗೆ 7 ರಿಂದ ಅಭಿಷೇಕ, ವಿಶೇಷ ಪೂಜೆ, ನಂತರ ಶ್ರೀ ಪಟ್ವೇದ ದಾಕ್ಷಾಯಣಮ್ಮ ಗಂಗಾಧರಪ್ಪ ಮಕ್ಕಳು, ಪಟ್ವೇದ ಮಹೇಶ್ವರಪ್ಪ ಶ್ರೀಮತಿ ಸುಮ ಇವರಿಂದ ಪ್ರಸಾದ ದಾಸೋಹ ಏರ್ಪಡಿಸಲಾಗಿದೆ. ಸದ್ಭಕ್ತರು ಭಾಗವಹಿಸುವಂತೆ ದೇವಸ್ಥಾನ ಸಮಿತಿಯ ಕಣಕುಪ್ಪಿ ಮುರುಗೇಶಪ್ಪ (96118 8915), ಟಿ.ಜಿ. ಬಕ್ಕೇಶ್ವರಪ್ಪ (91089 88898), ಬಿ. ಚಿದಾನಂದಪ್ಪ (98445 28449), ಮಲ್ಲಾಬಾದಿ ಗುರುಬಸವರಾಜ್ (79757 97079) ತಿಳಿಸಿದ್ದಾರೆ. ದಾಸೋಹ ಮನೆ ಮತ್ತು ಸಭಾಂಗಣ ಕಟ್ಟಡವು ಪ್ರಗತಿ ಹಂತದಲ್ಲಿದೆ. ಭಕ್ತಾದಿಗಳು ದೇಣಿಗೆ ಸಲ್ಲಿಸಲು ಕೋರಲಾಗಿದೆ.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ತಾಲ್ಲೂಕು ಸಾಹಿತ್ಯ ಸಮ್ಮೇಳನಕ್ಕೆ ಜಾಹ್ನವಿ ಅಧ್ಯಕ್ಷತೆ



ದಾವಣಗೆರೆ, ಫೆ. 9- ತಾಲ್ಲೂಕಿನ ಹೆಬ್ಬಾಳು ಗ್ರಾಮದಲ್ಲಿ ಇದೇ ದಿನಾಂಕ 27 ರ ಮಂಗಳವಾರ 10 ನೇ ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದ್ದು, ಲೇಖಕಿ, ಕಥೆಗಾರ್ತಿ, ರಂಗಾಭಿನಯ ಸೇರಿದಂತೆ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿರುವ ಶ್ರೀಮತಿ ಬಿ.ಟಿ. ಜಾಹ್ನವಿ ಅವರನ್ನು ಆಯ್ಕೆ ಮಾಡಲಾಗಿದೆ.

ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅವರ ನೇತೃತ್ವದಲ್ಲಿ, ತಾಲ್ಲೂಕು ಕಸಾಪ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸರ್ವಾನುಮತದಿಂದ ಈ ಆಯ್ಕೆಯನ್ನು ಮಾಡಲಾಗಿದೆ.

ಸಭೆಯಲ್ಲಿ ಕಸಾಪ ಜಿಲ್ಲಾ ಗೌರವ ಕಾರ್ಯದರ್ಶಿ ಬಿ. ದಿಳ್ಳೆಪ್ಪ, ತಾಲ್ಲೂಕು ಕಸಾಪ ಕಾರ್ಯದರ್ಶಿ ದಾಗಿನಕಟ್ಟೆ ಪರಮೇಶ್ವರಪ್ಪ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.


ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ

ಆಡಳಿತ ಮಂಡಳಿ ಚುನಾವಣೆ-2024

ಮಾನ್ಯ ಸದಸ್ಯರೇ,

ದಿನಾಂಕ : 11.02.2024ರ ಭಾನುವಾರದಂದು ನಡೆಯಲಿರುವ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ ಹಂಪಾಳಿ ನಾಗಮಣಿ ಬಸವರಾಜ, ವಕೀಲರೂ ಆದ ನಾನು ಹಿಂದುಳಿದ ಪ್ರವರ್ಗ-"ಬಿ" ಮೀಸಲು ಕ್ಷೇತ್ರದಿಂದ ಆಯ್ಕೆ ಬಯಸಿ ಸ್ಪರ್ಧಿಸಿದ್ದು, ಬ್ಯಾಂಕ್‌ನ ಸರ್ವತೋಮುಖ ಬೆಳವಣಿಗೆ ಹಾಗೂ ಅಭಿವೃದ್ಧಿಯ ಸಲುವಾಗಿ ಶ್ರಮಿಸಲಿದ್ದು, ತಮ್ಮಗಳ ಸೇವೆ ಮಾಡುವ ಮಹತ್ವಾಕಾಂಕ್ಷಿಯನ್ನು ಹೊಂದಿರುತ್ತೇನೆ. ಆದ್ದರಿಂದ ನಿಮ್ಮ ಅಮೂಲ್ಯವಾದ ಮತ ನೀಡುವುದರ ಮೂಲಕ ನನಗೆ ಆಶೀರ್ವದಿಸಿ ಸೇವೆಯನ್ನು ಸಲ್ಲಿಸುವ ಸದಾವಕಾಶ ನೀಡಬೇಕಾಗಿ ವಿನಂತಿ.

18 ಹಂಪಾಳಿ ನಾಗಮಣಿ ಬಸವರಾಜ್



ತಮ್ಮ ಸೇವಾಕಾಂಕ್ಷಿ :

ಹಂಪಾಳಿ ನಾಗಮಣಿ ಬಸವರಾಜ್

ವಕೀಲರು, ದಾವಣಗೆರೆ.

ಮೊ. : 94484 14944, 86182 74275

ನನ್ನ ಕ್ರಮ ಸಂಖ್ಯೆ -18

ಗುರುತಿನ ಚಿಹ್ನೆ - ಕೋಟು

ಚುನಾವಣೆ ದಿನಾಂಕ : 11.02.2024, ಭಾನುವಾರ

ಸಮಯ : ಬೆಳಿಗ್ಗೆ 9.00 ರಿಂದ ಸಂಜೆ 4.00

ಸ್ಥಳ : ಮೋತಿ ವೀರಪ್ಪ ಕಾಲೇಜ್ ಆವರಣ,ದಾವಣಗೆರೆ.



ಹೃದಯಪೂರ್ವಕ ಅಭಿನಂದನೆಗಳು

ದಿನಾಂಕ : 07.02.2024ರಂದು ನಡೆದ ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಲಿ., ದಾವಣಗೆರೆ ಇದರ ಆಡಳಿತ ಮಂಡಳಿ ಪದಾಧಿಕಾರಿಗಳ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ

ಕೋಗುಂಡಿ ಬಕ್ಕೇಶಪ್ಪ

ಅವರಿಗೆ ಅಭಿನಂದನೆಗಳು.

ಶುಭ ಕೋರುವವರು :

ಕಿತ್ತೂರು ಜಯಣ್ಣ,

ಅಕ್ಕಿ ವ್ಯಾಪಾರಿಗಳು.



ಹೃತ್ಪೂರ್ವಕ ಕೃತಜ್ಞತೆಗಳು



ದಿನಾಂಕ : 08.02.2024 ರಂದು ನಡೆದ ದಾವಣಗೆರೆ ತಾಲ್ಲೂಕು ಕುಕ್ಕುವಾಡ ಗ್ರಾ.ಪಂ. ಅಧ್ಯಕ್ಷ-ಉಪಾಧ್ಯಕ್ಷರ ಚುನಾವಣೆಯಲ್ಲಿ ನನ್ನನ್ನು ಅಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆಮಾಡಿದ ಗ್ರಾ.ಪಂ.ನ ಸರ್ವ ಸದಸ್ಯರಿಗೂ ಮತ್ತು ನನ್ನ ಆಯ್ಕೆಗೆ ಸಹಕರಿಸಿದ ಕುಕ್ಕುವಾಡ, ನಾಗರಸನಹಳ್ಳಿ, ಹೊನ್ನಮರಡಿ ಗ್ರಾಮಸ್ಥರಿಗೆ ಹಾಗೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಸರ್ವರಿಗೂ

ನಮ್ಮ ಹೃದಯಪೂರ್ವಕ ಕೃತಜ್ಞತೆಗಳು.

ಶ್ರೀಮತಿ ಸುಧಾ ಕೆ.ಎನ್. ಮಂಜುನಾಥ್

ಅಧ್ಯಕ್ಷರು, ಗ್ರಾ.ಪಂ. ಕುಕ್ಕುವಾಡ, ದಾವಣಗೆರೆ ತಾಲ್ಲೂಕು





THE TEAM ACADEMY

THE TEAM PU COLLEGE

DAVANGERE : Vidyanagara BIET Road, Anjaneya Badavane | SHIVAMOGGA : 2nd Stage, Ravindra Nagar, Savalanga Road.

Scholarship Test - 2024

for 1st PUC Admission (10th STATE , CBSE & ICSE)

Test Date : 11th February 2024

Students Secured MBBS Seat - 2023

Rashmi M G 634

Arpitha N 618

Nagadeepika M 610

Pavithra H N 625

Manoj J T 609

Khushi V H 604

Arpitha N MMC Mysore | Siddarth U M MMC Mandya | Nagadeepika M SIMS Shivamogga | Khushi V H SIMS Shivamogga | Pradeepa B S SIMS Shivamogga | Deepashree J JJM Davangere | Bharath Ganter SSIMS Davangere | Sanjana T SSIMS Davangere

Shivani P J SSIMS Davangere | Rashmi M G SABVMCRI Bengaluru | Manoj J T SABVMCRI Bengaluru | Neha M G AMC Bengaluru | Druvika Dixit AMC Bengaluru | Kavya D K GIMS Gadag | Gutyamma A K GIMS Gadag | Soujanya N GIMS Gadag

Sumalatha C GIMS Gulbarga | Pooja N GIMS Gulbarga | Yuvraj K P HIMS Haveri | Satvika HIMS Haveri | Mamatha K HIMS Haveri | Darshan B K KIMS Mangaluru | Pavithra H N BIMS Belgaum | Monika H R BIMS Chitradurga

Varshni Y Naik YIMS Yadgiri | Darshan H KIMS Karwar | Chetan Ram VIMS Ballari | Kampan Naik VIMS Ballari | Bhagyashree G P CIMS Chikkamagaluru | Tejaswini P M CIMS Chikkamagaluru | Srinivas M CIMS Chikkaballapura | Suresh B S CIMS Chamarajapete

JEE Advanced Toppers - 2023

Pradeepa B S AIR- 181

Soujanya N AIR- 952

Sanjana T AIR- 4152

For Davangere : 9035006723, 9035006724, 9035109411, 9900565795, 9538546758

For Shivamogga : 9035006726, 9035006727, 9902303441, 9963505593, 9591319279

**ಮಹಾಲಕ್ಷ್ಮಿ ಲೇಔಟ್‌ನಲ್ಲಿ**
30x40 (2) NF ಸೈಟ್ ಮಾರಾಟಕ್ಕೆ
Commercial Site (Small)
* Ring road 5755 Sqft SS`B'
* Dollers Colony Site 30x50
* MCC `A & B' - House site
* Siddaveerappa, Anjaneya Houses & Site * Vivekananda House
Veeresh - 76765 58585

**ಸೈಟುಗಳು ಮಾರಾಟಕ್ಕಿವೆ**
ಎಸ್.ಎಸ್. ಬಡಾವಣೆ 'ಎ' ಬ್ಲಾಕ್ ಪೂರ್ವ 40x60, ಎಸ್.ಎಸ್. 'ಬಿ' ಬ್ಲಾಕ್ ಉತ್ತರ 40x60, ಶಿವ-ಪಾರ್ವತಿ ಬಡಾವಣೆ ಪೂರ್ವ 30x55, 30x70, 40x70, 40x60 (ಅಕ್ಕ-ಪಕ್ಕ) ಪಶ್ಚಿಮ 30x55, ಬನಶಂಕರಿ ಬಡಾವಣೆ ಪೂರ್ವ-ದಕ್ಷಿಣ ಕಾರ್ನರ್ 30x50 (60 ಅಡಿ ರಸ್ತೆ)
ಐಗೂರು ವಿಜಯಕುಮಾರ
99457 02495

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಮನೆ ಲೀಜ್‌ಗೆ ಇದೆ**
ನಿಟ್ಟುವಳ್ಳಿ ಮುಖ್ಯ ರಸ್ತೆ, ಲೇಬರ್ ಕಾಲೋನಿ 2ನೇ ಕ್ರಾಸ್‌ನಲ್ಲಿ 2ನೇ ಮಹಡಿಯಲ್ಲಿ ಉತ್ತರ ದಿಕ್ಕಿನ ಎರಡು ಬೆಡ್‌ರೂಮ್‌ನ ಮನೆ ಲೀಜ್‌ಗೆ ಇದೆ. ಸಂಪರ್ಕಿಸಿ :
78996 81386, 96206 92911

**Property Hub**
• EC
• Eswathu
• Building Licence
• Khatha Change
96118 66449

**ಬೋರ್ ಪಾಯಿಂಟ್**
ವೈಜ್ಞಾನಿಕ ವಿಧಾನದಿಂದ ಬೋರ್ ಪಾಯಿಂಟ್ ಮಾಡಿಕೊಡಲಾಗುವುದು.
86609 98651
97436 54365

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಟಾಟಾ ಪವರ್ ಸೋಲಾರ್ ಮಾರ್ಕೆಟಿಂಗ್ ಮಾಡಲು ಡಿಗ್ರಿ ಮುಗಿಸಿರುವ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ : M/s ಬಸವಶ್ರೀ ಸೋಲಾರ್ ಟೆಕ್ನಾಲಜೀಸ್, ನಂ. 43ಹೆಚ್, ಎಸ್.ಜೆ.ಜೆ.ಎಂ. ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರಸ್ತೆ, ದಾವಣಗೆರೆ.
ಮೊ.99001 42052
ಸಮಯ : 1 PM to 5 PM

**ಸೈಟುಗಳು ಮಾರಾಟಕ್ಕಿವೆ**
30x50 ಟಾಟಾ ಶೋ ರೂಮ್ ಹಿಂಭಾಗ ಸಿದ್ಧಗಂಗಾ ಲೇಔಟ್ ಕಾಂಕ್ರೀಟ್ ರೋಡ್, Good Location, 120 ಅಡಿ ರಿಂಗ್ ರೋಡ್ ಹಿಂಭಾಗ, Near PB Road, ಆವರಗೆರೆ, ದಾವಣಗೆರೆ. ಸಂಪರ್ಕಿಸಿ :
98452 95326

**ಅಡುಗೆ ಭಟ್ಟರು ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ಅಡುಗೆ ಭಟ್ಟರು ಬೇಕಾಗಿದ್ದಾರೆ
99003 66782

**ಮನೆ ಬಾಡಿಗೆಗೆ ಇದೆ**
ಪಿ.ಜೆ. ಬಡಾವಣೆ, # 397, 8ನೇ ಕ್ರಾಸ್, 8ನೇ ಮೇನ್, ಮಹಾತ್ಮಗಾಂಧಿ ಲ್ಯಾಬ್ ಹತ್ತಿರ, 1ನೇ ಮಹಡಿ, 20x40ರ ಅಳತೆ, 2ಬೆಡ್ ರೂಮ್, ಓಪನ್ ಕಿಚನ್, ಹಾಲ್, ಅಟ್ಯಾಚ್ಡ್ ಬೆಡ್ ರೂಂ. (ಸಸ್ಯಹಾರಿಗಳಿಗೆ ಮಾತ್ರ)
94482 48242, 78927 53714

**ಮನೆ ಬಾಡಿಗೆಗೆ ಇದೆ**
30x50 ಪೂರ್ವ ಬಾಗಿಲು 3 ಬೆಡ್ ರೂಂ, ಗ್ರೌಂಡ್ ಫ್ಲೋರ್‌ನಲ್ಲಿ ಸರಸ್ವತಿ ನಗರ, ಡಾಬಾ ಸ್ಟಾಪ್, ದಾವಣಗೆರೆ
98802 76367
90607 90962

**SHASHI SAMAJA**
Organising 3 days training on international Hair styling. By Mr. Reehan at Davanagere.
For Details Contact :
95912 26273, 99456 51521

**ಸೈಟು & ಮನೆ ಮಾರಾಟಕ್ಕಿವೆ**
1) ಡಾಲರ್ಸ್ ಕಾಲೋನಿ ಮನೆ (30x50) ಪಶ್ಚಿಮ
2) ಡಾಲರ್ಸ್ ಕಾಲೋನಿ ಸೈಟ್ (40x51) ಪಶ್ಚಿಮ
3) ಹಳೇ ಕುಂದವಾಡ ಸೈಟ್ (30x50) ಪಶ್ಚಿಮ
ಸಂಪರ್ಕಿಸಿ:
97404 47907, 91481 25125

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ: **ಪ್ರಕಾಶ ಟಿವಿ ಸೆಂಟರ್**
ಕುರುಬರ ಹಾಸ್ಟೆಲ್ ಎದುರು, ಶ್ರೀಮುರುಘರಾಜೇಂದ್ರ ಕಾಂಪ್ಲೆಕ್ಸ್, ಹದಡಿ ರಸ್ತೆ, ದಾವಣಗೆರೆ.

**ಮನೆ ಮಾರಾಟಕ್ಕಿದೆ**
1828/A25,ಆಂಜನೇಯ ಬಡಾವಣೆ,18ನೇ ಕ್ರಾಸ್ ನಲ್ಲಿರುವ ಡುಪ್ಲೆಕ್ಸ್ (North Face), 1ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ (East Face) ವಾಸ್ತು ಪ್ರಕಾರ ಎಲ್ಲಾ ಅನುಕೂಲವಿರುವ fully furnished, ಬೋರ್ ವೆಲ್ & ಕಾರ್ಪೊರೇಶನ್ ನೀರಿನ ವ್ಯವಸ್ಥೆ ಇರುವ ಮನೆ ಮಾರಾಟಕ್ಕೆ ಇದೆ.
9008432505 /9902432505

ಶ್ರೀ ದುಗ್ಗಮ್ಮ ದೇವಿ ಪ್ರಸನ್ನ
**ಟಗರು ಮಾರಾಟಕ್ಕಿವೆ**
ನೇರ ರೈತರಿಂದ ಮಾರಾಟ 2 ಹಲ್ಲು 4 ಹಲ್ಲಿನ ಟಗರುಗಳು ಸಿಗುತ್ತವೆ, ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ :
80883 67539, 97390 63544

**WE ARE HIRING**
Opening In Back Office Work, No Of Post - 2, Good Communication Skill and Excel Knowledge. Female Candidates Only. Davanagere.
94822 57570

**ಸಾಯಿಬಾಬಾ ಬೋರ್‌ವೆಲ್**
ಮನೆ ಒಳಗೆ ಮತ್ತು ಹೊರಗೆ ಬೋರ್‌ವೆಲ್ ಕೊರೆಯುವುದು 41/2ಇಂಚು, 350 ರಿಂದ 400ರವರೆಗೆ ಬೋರ್ ಕೊರೆಯುವುದು.
99640 78484
95906 15776

**WANTED**
Accountant for Electronics Shop
**BHERAV DISTRIBUTOR**
Jaydev Circle Davangere
Minimum 2 year experience in Account handling. Boys only
Qualification : B.Com or MBA
90365-74144


# ವಾಲ್ಮೀಕಿ ಜಾತ್ರೆ ಅರಿವಿನ ಜಾತ್ರೆ ಅಷ್ಟೇ ಅಲ್ಲ, ಭಾವೈಕ್ಯತೆಯ ಸಂಗಮ



## ವಾಲ್ಮೀಕಿ ಜಾತ್ರೆಯ ಧರ್ಮಸಭೆಯಲ್ಲಿ ಶ್ರೀ ದಿಂಗಾಲೇಶ್ವರ ಸ್ವಾಮೀಜಿ ಮೆಚ್ಚುಗೆ

ಮಲೇಬೆನ್ನೂರು, ಫೆ. 9- ವಾಲ್ಮೀಕಿ ಜಾತ್ರೆ ಅರಿವಿನ ಜಾತ್ರೆ ಅಷ್ಟೇ ಅಲ್ಲ, ವಾಲ್ಮೀಕಿ ಜಾತ್ರೆ ಭಾವೈಕ್ಯತೆಯ ಸಂಗಮವಾಗಿ ಹೊರ ಹೊಮ್ಮಿದೆ ಎಂದು ಬಾಳೆಹೊಸೂರು ಹಾಗೂ ಶಿರಹಟ್ಟಿ ಮಠದ ಶ್ರೀ ಫಕ್ಕೀರ ದಿಂಗಾಲೇಶ್ವರ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಇಂದು ನಡೆದ 6ನೇ ವರ್ಷದ ವಾಲ್ಮೀಕಿ ಜಾತ್ರೆಯಲ್ಲಿ ಹಮ್ಮಿಕೊಂಡಿದ್ದ ಧರ್ಮ ಸಭೆಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಭಕ್ತರು ಮಠದ ಕಾರ್ಯಕ್ರಮಗಳಿಗೆ ಮನೆ ಮಂದಿಯನ್ನು ಕರೆದುಕೊಂಡು ಬರುವ ಸಂಪ್ರದಾಯ ರೂಢಿಸಿಕೊಳ್ಳಬೇಕೆಂದು ಕರೆ ನೀಡಿದ ದಿಂಗಾಲೇಶ್ವರ ಶ್ರೀಗಳು, ಯಾವ ಬಿರುಗಾಳಿ ಬೀಸಿದರೂ ಸ್ವಾಮೀಜಿ ಗುಡ್ಡದಂತೆ ಗಟ್ಟಿಯಾಗಿರಬೇಕು.

ಯಾವುದೇ ಟೀಕೆ-ಟಿಪ್ಪಣಿಗಳಿಗೆ ಕಿವಿಕೊಡದೇ ಸಮಾಜಮುಖಿ ಕೆಲಸಗಳನ್ನು ಮತ್ತು ಶಿಕ್ಷಣ ನೀಡುವ ಕೆಲಸವನ್ನು ಮಾಡಬೇಕೆಂದು ಹೇಳಿದರು.

ಅಂಬಿಗರ ಚೌಡಯ್ಯ ಗುರುಪೀಠದ ಶ್ರೀ ಶಾಂತಭೀಷ್ಮ ಸ್ವಾಮೀಜಿ ಮಾತನಾಡಿ, ಬೇಡರು ಮತ್ತು ಅಂಬಿಗರು ರಾಮಾಯಣ, ಮಹಾಭಾರತ ಎಂಬ ಪವಿತ್ರ ಗ್ರಂಥಗಳನ್ನು ಈ ಜಗತ್ತಿಗೆ ಕೊಟ್ಟಿದ್ದಾರೆ.

ಹಿಂದುಳಿದ ಸಮಾಜಗಳು ಶೈಕ್ಷಣಿಕ, ಸಾಮಾಜಿಕ, ರಾಜಕೀಯ ಪ್ರಾತಿನಿಧ್ಯ ಪಡೆಯಲು ಗುರುಪೀಠಗಳು ಸಹಕಾರಿಯಾಗಿದ್ದು, ಈ ನಿಟ್ಟಿನಲ್ಲಿ ವಾಲ್ಮೀಕಿ ಶ್ರೀಗಳು ಪಾದಯಾತ್ರೆ, ಸತ್ಯಾಗ್ರಹ ಮಾಡಿ ಎಸ್ಸಿ-ಎಸ್ಟಿ ಮೀಸಲಾತಿ ಹೆಚ್ಚಳ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ವಾಲ್ಮೀಕಿ ಜಾತ್ರೆಯಿಂದಾಗಿ ಇಲ್ಲಿ ಇಷ್ಟೊಂದು ಸಂಭ್ರಮದ ಮೂಲಕ ಜನರಿಗೆ ಅರಿವಿನ ಜ್ಞಾನ ನೀಡಲಾಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬಂಜಾರ ಗುರುಪೀಠದ ಶ್ರೀ ಸೇವಾಲಾಲ್ ಸ್ವಾಮೀಜಿ ಮಾತನಾಡಿ, ಶ್ರೀಗಳ ಹೋರಾಟದ ಫಲವಾಗಿ ಕೇವಲ ಎಸ್ಟಿ ಮೀಸಲಾತಿ ಹೆಚ್ಚಳ ಆಗಲಿಲ್ಲ, ಎಸ್ಸಿ ಮೀಸಲಾತಿಯೂ ಹೆಚ್ಚಳವಾಗಿದೆ. ಅದಕ್ಕಾಗಿ ಶ್ರೀಗಳನ್ನು ಅಭಿನಂದಿಸುತ್ತೇವೆ ಎಂದು ಶ್ರೀಗಳು ತಿಳಿಸಿದರು.

ಮಾದಾರ ಚೆನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಶಿವಮೊಗ್ಗ ಬಸವ ಕೇಂದ್ರದ ಡಾ. ಬಸವ ಮರುಳಸಿದ್ಧ ಸ್ವಾಮೀಜಿ ಮಾತನಾಡಿ, ವಾಲ್ಮೀಕಿ ಜಾತ್ರೆ ಸಮಾಜದ ಪರಿವರ್ತನೆಗೆ ದಾರಿದೀಪವಾಗಿದೆ ಎಂದು ಹೇಳಿದರು.

ಜೇವರ್ಗಿಯ ಮರುಳಶಂಕರ ದೇವರಮಠದ ಶ್ರೀ ಸಿದ್ಧಬಸವ ಕಬೀರ ಸ್ವಾಮೀಜಿ ಮಾತನಾಡಿ, ಬೇಡರು ಶೂರರು-ಧೀರರು ಅಷ್ಟೇ ಅಲ್ಲ. ಉದಾರಿಗಳು-ದಾನಿಗಳೂ ಕೂಡಾ ಆಗಿದ್ದಾರೆ. ಮೀಸಲಾತಿ ಹೆಚ್ಚಳ ವಿಷಯದಲ್ಲಿ ಶ್ರೀಗಳು ನಡೆಸಿದ ಪಾದಯಾತ್ರೆ-ಸತ್ಯಾಗ್ರಹ ಇತಿಹಾಸ ಸೇರಿದ್ದು, ಮಹಾತ್ಮ ಗಾಂಧೀಜಿ ನಂತರ ಅತಿ ಹೆಚ್ಚು ದಿನ ಸತ್ಯಾಗ್ರಹ ನಡೆಸಿದ ಕೀರ್ತಿ ವಾಲ್ಮೀಕಿ ಶ್ರೀಗಳಿಗೆ ಸಲ್ಲುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.


ಲಿಂ. ಶ್ರೀ ಪುಣ್ಯಾನಂದ ಪುರಿ ಶ್ರೀಗಳವರ ತಾಯಿ ಶ್ರೀಮತಿ ಮಹಾದೇವಮ್ಮ ರಂಗಸ್ವಾಮಿ ಅವರನ್ನು ಈ ವೇಳೆ ಎಲ್ಲಾ ಮಠಾಧೀಶರು ಸೇರಿ ಗೌರವಿಸಿದರು.

ಪಂಚಮಸಾಲಿ ಗುರುಪೀಠದ ಶ್ರೀ ವಚನಾನಂದ ಸ್ವಾಮೀಜಿ, ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಯೋಗಿ ವೇಮನ ಗುರುಪೀಠದ ಶ್ರೀ ವೇಮಾನಂದ ಸ್ವಾಮೀಜಿ, ಮಡಿವಾಳ ಮಾಚಿದೇವ ಗುರುಪೀಠದ ಶ್ರೀ ಬಸವ ಮಡಿವಾಳ ಮಾಚಿದೇವ ಸ್ವಾಮೀಜಿ, ವನಶ್ರೀ ಸಂಸ್ಥಾನದ ಡಾ. ಬಸವಕುಮಾರ ಸ್ವಾಮೀಜಿ, ಯಾದವ ಗುರುಪೀಠದ ಶ್ರೀ ಬಸವ ಯಾದವಾನಂದ ಸ್ವಾಮೀಜಿ, ಕುಂಚಿಟಿಗ ಗುರುಪೀಠದ ಶ್ರೀ ಶಾಂತವೀರ ಸ್ವಾಮೀಜಿ, ಹಡಪದ ಮಠದ ಶ್ರೀ ಹಡಪದ ಅಪ್ಪಣ್ಣ ಸ್ವಾಮೀಜಿ, ಬ್ರಹ್ಮಶ್ರೀ ನಾರಾಯಣ ಗುರುಪೀಠದ ಶ್ರೀ ರೇಣುಕಾನಂದ ಸ್ವಾಮೀಜಿ, ಮೇದಾರ ಗುರುಪೀಠದ ಶ್ರೀ ಬಸವಪ್ರಭು ಇಮ್ಮಡಿ ಕೇತೇಶ್ವರ ಸ್ವಾಮೀಜಿ, ಪುಣ್ಯಕೋಟಿ ಮಠದ ಶ್ರೀ ಬಾಲಯೋಗಿ ಜಗದೀಶ್ವರ ಸ್ವಾಮೀಜಿ, ಗೊಲ್ಲಪಲ್ಲಿ ವಾಲ್ಮೀಕಿ ಆಶ್ರಮದ ಶ್ರೀ ವರದಾನೇಶ್ವರ ಸ್ವಾಮೀಜಿ, ಶಿಡ್ಲೇಕೋಣ ವಾಲ್ಮೀಕಿ ಆಶ್ರಮದ ಶ್ರೀ ಸಂಜಯ ಕುಮಾರ ಸ್ವಾಮೀಜಿ, ನೇಗಿನಾಳ ಮಠದ ಶ್ರೀ ಬಸವ ಪ್ರಕಾಶ ಸ್ವಾಮೀಜಿ, ಕೊಪ್ಪಳದ ಶ್ರೀ ಸಿದ್ದಲಿಂಗ ಸ್ವಾಮೀಜಿ, ಗಂಗಾಪುರ ಸಿದ್ಧಾರೂಢಾಶ್ರಮದ ಶ್ರೀ ಮರುಳಶಂಕರ ಸ್ವಾಮೀಜಿ, ಯರಗಟ್ಟಿ ಸಿದ್ಧಾರೂಢ ಮಠದ ಶ್ರೀ ಜಯದೇವ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಶಾಸಕರಾದ ಯು.ಬಿ.ಬಣಕಾರ, ಶ್ರೀನಿವಾಸ ಮಾನೆ, ಜಗಳೂರು ದೇವೇಂದ್ರಪ್ಪ, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಜಾತ್ರಾ ಸಮಿತಿ ಸಂಚಾಲಕ ಬಿ.ಶಿವಪ್ಪ, ಮಠದ ಧರ್ಮದರ್ಶಿಗಳಾದ ಶ್ರೀಮತಿ ಶಾಂತಲಾ, ರಾಜಣ್ಣ, ಡಾ.ಜಿ.ರಂಗಯ್ಯ, ಹರ್ತಿಕೋಟೆ ವೀರೇಂದ್ರ ಸಿಂಹ, ಶಾಂತಕುಮಾರ ಸುರಪುರ, ಹಾಸನದ ಮಹೇಶ್, ಬಿ.ವೀರಣ್ಣ, ಹೊಸಪೇಟೆಯ ಜಂಬಯ್ಯ ನಾಯಕ, ಕೋಲಾರ ವೆಂಕಟರಮಣ, ಹರಿಹರದ ಕೆ.ಬಿ. ಮಂಜುನಾಥ್, ಮುಖಂಡರಾದ ಚಿತ್ರದುರ್ಗದ ಶ್ರೀನಿವಾಸ ನಾಯಕ, ಟಿ.ಈಶ್ವರ್, ಹೊದಿಗೆರೆ ರಮೇಶ್, ಜಿಗಳಿಯ ಜಿ.ಆನಂದಪ್ಪ, ಕೆ.ಆರ್.ರಂಗಪ್ಪ, ಹರಿಹರದ ದಿನೇಶ್ ಬಾಬು, ಮಾರುತಿ ಬೇಡರ್, ಪಾರ್ವತಿ ಬೋರಯ್ಯ, ವಿಜಯಶ್ರೀ ಮಹೇಂದ್ರಕುಮಾರ್, ಗೌರಮ್ಮ ಮಂಜುನಾಥ್ ಸೇರಿದಂತೆ ಇನ್ನೂ ಅನೇಕರು ವೇದಿಕೆಯಲ್ಲಿದ್ದರು.

## ಹಾವೇರಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ

# ಜನಪರ ಚಿಂತನೆಯ ಜಂಗಮ ಜಯದೇವಯ್ಯ



ಬಿಳಿ ಶರ್ಟ್, ಬಿಳಿ ಕಚ್ಚೆ ಪಂಚೆ, ಬಗಲಲ್ಲೊಂದು ಬ್ಯಾಗ್ ಹಿಡಿದು, ಹಣೆಗೆ ವಿಭೂತಿ ಧರಿಸಿದ ಲವಲವಿಕೆಯ ವಾಮನಮೂರ್ತಿಯೊಂದು ನಡೆದು ಬರುತ್ತಿರುವುದು ಕಂಡು ಬಂದರೆ ಅವರೇ 88ರ ಹರೆಯದ ನಿವೃತ್ತ ಶಿಕ್ಷಕ ಜಯದೇವಯ್ಯ ಮಠದ ಎಂದು ಗುರುತಿಸಬಹುದು. ದಿನಾಂಕ 11 ಮತ್ತು 12 ರಂದು ರಾಣೇಬೆನ್ನೂರಿನಲ್ಲಿ ನಡೆಯುವ 13ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಿವರು.

1933ರಲ್ಲಿ ತಾಲ್ಲೂಕಿನ ಹೊಳೆ ಆನ್ವೇರಿಯ ಮಹದೇವಯ್ಯ ಬಸಮ್ಮ ದಂಪತಿಯ ಉದರದಲ್ಲಿ ಜನಿಸಿ, ತಮ್ಮ 9ನೇ ವಯಸ್ಸಿಗೆ ತಾಯಿಯನ್ನು ಕಳೆದುಕೊಂಡರು. ಬಡತನದ ಬವಣೆಯಿಂದ ವಾರದನ್ನದ ಮನೆಗಳನ್ನು ಆಶ್ರಯಿಸಿ ಚಳಗೇರಿ, ಮುದೇನೂರು, ಹುಬ್ಬಳ್ಳಿಗಳಲ್ಲಿ ಶಿಕ್ಷಣ ಪೂರೈಸಿ 1955ರಲ್ಲಿ ಕಾಟನ್ ಸೇಲ್ಸ್ ಸೊಸೈಟಿಯಲ್ಲಿ ಕೆಲಸಕ್ಕೆ ಸೇರುತ್ತಾರೆ. ನಂತರ ಖಾಸಗಿ ಶಾಲೆಯ ಶಿಕ್ಷಕ ವೃತ್ತಿ ಪ್ರಾರಂಭಿಸಿ 1962ರಿಂದ ಸರ್ಕಾರಿ ಶಾಲಾ ಶಿಕ್ಷಕರಾಗಿ ತಾಲ್ಲೂಕಿನ ವಿವಿಧ ಶಾಲೆಗಳಲ್ಲಿ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿ 1994ರಲ್ಲಿ ನಿವೃತ್ತರಾಗುತ್ತಾರೆ. ಮುಖ್ಯ ಮಂತ್ರಿ ರಾಮಕೃಷ್ಣ ಹೆಗಡೆ ಅವರಿಂದ ರಾಜ್ಯ ಪ್ರಶಸ್ತಿ ಸ್ವೀಕರಿಸಿದ ಜಯದೇವಯ್ಯ ಮಠದ ಇಂದಿಗೂ ಸ್ವಯಂಪ್ರೇರಿತರಾಗಿ ಶಾಲೆಗಳಿಗೆ ತೆರಳಿ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆ, ಕನ್ನಡ ಸಂಖ್ಯೆಗಳ ಬಳಕೆ, ಮನಸ್ಸನ್ನು ಕಲುಷಿತಗೊಳಿಸುವ ಮಾಧ್ಯಮ ಗಳಿಂದ ಅಂತರ ಕಾಯ್ದುಕೊಳ್ಳುವಂತೆ ತಿಳಿ ಹೇಳುವುದು, ಮಕ್ಕಳಿಗೆ ಸಾಹಿತ್ಯದ ಅಭಿರುಚಿ ಮೂಡಿಸುವ ಪ್ರಯತ್ನ ಅವರ ದಿನಚರಿಯಾಗಿದೆ.

ಬರೆಯುವ, ಹಾಡುವ, ಚರ್ಮವಾದ್ಯ ನುಡಿಸುವ, ಅದರಲ್ಲೂ ಬುಲ್ ಬುಲ್ ಸಿತಾರಾ ಅಚ್ಚುಮೆಚ್ಚು. 'ಮೊದಲು ಮಾನವನಾಗು' 'ಬದುಕು ಚಹಾದ ಬಟ್ಟಲಲ್ಲ' ಸೇರಿದಂತೆ ಎಂಟು ಪುಸ್ತಕಗಳ ಜೊತೆಗೆ, ಜಿಲ್ಲಾ ಮಕ್ಕಳ ಸಾಹಿತ್ಯ ಪರಿಷತ್ ಸ್ಥಾಪಿಸಿ ಸಭೆ, ಸಮಾರಂಭಗಳನ್ನು ಆಯೋಜಿಸಿದ್ದಾರೆ. ಪ್ರತಿದಿನವೂ ಚೌಡಯ್ಯದಾನಾಪುರದಿಂದ ಸರ್ಕಾರಿ ಬಸ್ ನಲ್ಲಿ ರಾಣೇಬೆನ್ನೂರಿಗೆ ಬರುವ ಇವರ ಕೈಯಲ್ಲಿ ನಾಡು, ನುಡಿ, ಅಧ್ಯಾತ್ಮಿಕ, ಸಾಮಾಜಿಕ ಚಟುವಟಿಕೆಯ ಯಾವದಾದರೊಂದು ಕರಪತ್ರ ಇದ್ದೇ ಇರುತ್ತದೆ. ಸಮ್ಮೇಳನದ ಸರ್ವಾಧ್ಯಕ್ಷ ಸ್ಥಾನಕ್ಕೆ ಮೆರಗು ತಂದವರಿವರು.

- ಮನೋಹರ ಮಲ್ಲಾಡದ

# ಲಕ್ಷ್ಮಿ ಕ್ರೆಡಿಟ್ ಸೊಸೈಟಿ ಅವ್ಯವಹಾರ ಆರೋಪ

## ಠೇವಣಿದಾರರಿಂದ ಮುಖ್ಯಮಂತ್ರಿ, ಸಹಕಾರ ಸಚಿವರಿಗೆ ಮೊರೆ



ದಾವಣಗೆರೆ,ಫೆ.9- ನಗರದ ಲಕ್ಷ್ಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಠೇವಣಿದಾರರ ಸಂಘದ ಪದಾಧಿಕಾರಿಗಳು ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಿದಾಗ, ಶೀಘ್ರುವೇ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿರುತ್ತಾರೆ. ಅಲ್ಲದೇ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಸಹಕಾರ ಸಚಿವರೂ ಆಶ್ವಾಸನೆ ಕೊಟ್ಟಿದ್ದಾರೆ ಎಂದು ಸಂಘದ ಪದಾಧಿಕಾರಿಗಳು ತಿಳಿಸಿದ್ದಾರೆ.

ಬ್ರಾಹ್ಮಣ ಸಮಾಜದ ಸೊಸೈಟಿಯೆಂದೇ ಪ್ರಖ್ಯಾತವಾಗಿದ್ದ ಲಕ್ಷ್ಮೀ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯಲ್ಲಿ 2010-11 ರಿಂದಲೇ ಕೋಟಿಗಟ್ಟಲೇ ಅವ್ಯವಹಾರ ನಡೆದಿದ್ದು, 2016-17 ರಿಂದಲೂ ಅವಧಿ ಮುಕ್ತಾಯವಾದರೂ ಹಣ ವಾಪಸ್ ನೀಡದೇ ಠೇವಣಿ ಇಟ್ಟ ಜನ ಬೀದಿ ಪಾಲಾಗಿದ್ದಾರೆ. ನಿರ್ದೇಶಕರೆಲ್ಲರೂ ಪ್ರಭಾವಶಾಲಿ ಬ್ರಾಹ್ಮಣ ಕುಟುಂಬಕ್ಕೆ ಸೇರಿದವರಾಗಿದ್ದು, ಸಮಾಜದ ಘನತೆಗೆ ಕುಂದು ತಂದಿದ್ದಾರೆ.

ಈಗಾಗಲೇ ನಿರ್ದೇಶಕರುಗಳ ಮೇಲೆ ಎಫ್‌ಐಆರ್ ದಾಖಲಾಗಿದ್ದು, ಮುಂದಿನ ತನಿಖೆಗೆ ಸಿಐಡಿ ಬೆಂಗಳೂರಿಗೆ ಕಳಿಸಿದ್ದು ತನಿಖೆಯಾಗಬೇಕಾಗಿದ್ದು, ಯಾವುದೇ ಪ್ರಗತಿ ಆಗಿರುವುದಿಲ್ಲ.

ನಿರ್ದೇಶಕರುಗಳ ಆಸ್ತಿಗಳನ್ನು 2023 ಮಾರ್ಚ್ ತಿಂಗಳಲ್ಲಿ ಕರ್ನಾಟಕ ಸರ್ಕಾರ ಮುಟ್ಟುಗೋಲು ಹಾಕಿಕೊಂಡಿದ್ದು, ಕರ್ನಾಟಕದ ಗೆಜೆಟ್‌ನಲ್ಲಿ ಇವರೆಲ್ಲ ಮೋಸ ಮಾಡಿದ್ದಾರೆಂದು ಉಲ್ಲೇಖಿಸಲಾಗಿದೆ.

ಅನೇಕ ಜನ ಠೇವಣಿದಾರರು ಕೋವಿಡ್‌ನಿಂದಲೂ, ವೃದ್ಧಾಪ್ಯದಿಂದಲೂ ನಿಧನರಾಗಿದ್ದಾರೆ. ಅಂಗವಿಕಲರು, ಮಹಿಳೆಯರು, ಹಿರಿಯ ನಾಗರಿಕರು, ಪಿಂಚಣಿದಾರರು, ಮದುವೆಗೆಂದು ಇಟ್ಟಿದ್ದ ಹಣ ಬಾರದೇ ಕೆಲ ಪೋಷಕರೂ ಸಹ ನಿಧನರಾಗಿದ್ದು ಎಲ್ಲರೂ ಬೀದಿ ಪಾಲಾಗಿರುತ್ತಾರೆ. ಸೊಸೈಟಿಯು ಸ್ವಂತ ಕಟ್ಟಡ ಹೊಂದಿದ್ದು, 2018 ರಲ್ಲಿ ಡಿಸಿಸಿ ಬ್ಯಾಂಕ್‌ಗೆ 2 ಕೋಟಿ ಆಧಾರ ಮಾಡಿದ್ದು, ಆ ಹಣವನ್ನು ದುರುಪಯೋಗ ಮಾಡಿಕೊಂಡಿರುತ್ತಾರೆ ಎಂದು ಸಂಘದ ಅಧ್ಯಕ್ಷ ಎಂ.ಬಿ. ಜಗನ್ನಾಥರಾವ್ ದೂರಿದ್ದಾರೆ.

# ಅತಿ ಹಿಂದುಳಿದ ವರ್ಗಗಳ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಶಕ್ತಿ ಹೆಚ್ಚಿಸಲು ಒತ್ತಾಯ

ದಾವಣಗೆರೆ, ಫೆ. 9- ರಾಜ್ಯದಲ್ಲಿರುವ ಅತಿ ಹಿಂದುಳಿದ ವರ್ಗಗಳ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಶಕ್ತಿಗಳನ್ನು ಹೆಚ್ಚಿಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸುವುದಾಗಿ ಅತಿ ಹಿಂದುಳಿದ ಮಠಾಧೀಶರ ಮಹಾಸಭಾ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ಡಾ. ಪ್ರಣವಾನಂದ ಸ್ವಾಮೀಜಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪಕ್ಷದ ಏಳಿಗಾಗಿ ನಿಷ್ಠೆಯಿಂದ ದುಡಿದ ನಮ್ಮ ಸಮಾಜದ ನಾಯಕರನ್ನು ಇಂದಿನ ನಾಯಕರು ಸ್ವಾರ್ಥಕ್ಕಾಗಿ ದೂರವಿಟ್ಟಿದ್ದಾರೆ. ಕೆ.ಸಿ.ಕೊಂಡಯ್ಯ, ಶಿವಮೂರ್ತಿ ನಾಯ್ಕ, ಜನಾರ್ದನಾ ಪೂಜಾರಿ ಮತ್ತಿತರೆ ನಾಯಕರನ್ನು ಮೂಲೆಗುಂಪು ಮಾಡಿರುವುದರಿಂದ ನಮ್ಮ ಸಮಾಜಗಳು ಎಲ್ಲಾ ಕ್ಷೇತ್ರಗಳಲ್ಲೂ ಹಿಂದುಳಿಯಲು ಕಾರಣವಾಗಿದೆ ಎಂದರು. ಸರ್ಕಾರ ಕಾಂತರಾಜ್ ವರದಿಯನ್ನು ಕೂಡಲೇ ಜಾರಿಗೆ ತರಬೇಕು. ಅತಿ ಹಿಂದುಳಿದ ವರ್ಗಗಳ ಪ್ರತಿ ನಿಗಮಕ್ಕೆ 500 ಕೋಟಿ ರೂ. ಬಿಡುಗಡೆ ಮಾಡಬೇಕು. ಕೋಲಾರ ಕೌನ್ಸಿಲರ್ ಶ್ರೀನಿವಾಸ ಅವರ ಬರ್ಬರ ಹತ್ಯೆಯ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ಆಗ್ರಹಿಸಿದರು.

ಕಲಿಕೆ, ಸೌಖ್ಯ ರಕ್ಷಣೆ ಹಿನ್ನೆಲೆಯಲ್ಲಿ ಚಾಲ್ತಿಯಲ್ಲಿರುವ ಕುಲಕಸುಬುಗಳನ್ನು ವ್ಯವಸ್ಥಿತವಾಗಿ ಮಾಡಬೇಕು. ನಿಷೇಧ ಮಾಡಿರುವ ಕುಲಕಸಬುಗಳನ್ನು ಮರಳಿ ನೀಡುವುದು ಅಥವಾ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಬೇಕೆಂದು ಒತ್ತಾಯಿಸಿದರು.

ಜಾತಿ ಮೀಸಲಾತಿ, ಒಳ ಮೀಸಲಾತಿಗಾಗಿ ಹೋರಾಟ ಮಾಡುವ ಅತಿ ಹಿಂದುಳಿದ ವರ್ಗದವರ ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಮಾಡಿದರು.

ಸಂಸ್ಥಾಪಕ ರಾಷ್ಟ್ರೀಯ ಅಧ್ಯಕ್ಷ ಶ್ರೀ ಬಸವ ನಾಗೀದೇವ ಸ್ವಾಮೀಜಿ ಮಾತನಾಡಿ, ನಾವು ನಮ್ಮ ಸಮಾಜಕ್ಕಾಗಿ ಸಂವಿಧಾನ ಬದ್ಧ ಹಕ್ಕಿಗಾಗಿ ಒಂದಾಗಿ ಹೋರಾಡಬೇಕಿದೆ ಎಂದರು.

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಒಳ ಮೀಸಲಾತಿ ಜಾರಿಗೆ ತರುವುದಾಗಿ ಹೇಳಿ ಅವಧಿ ಮುಗಿದರೂ ಜಾರಿಗೆ ಬರಲಿಲ್ಲ. ಇದೀಗ ಕಾಂಗ್ರೆಸ್ ಕೂಡ ಪ್ರಣಾಳಿಕೆಯಲ್ಲಿ ಒಳಮೀಸಲಾತಿ ಬಗ್ಗೆ ಪ್ರಸ್ತಾಪ ಮಾಡಿದೆ. ಇದುವರೆಗೂ ಸಹ ಕಾರ್ಯರೂಪಕ್ಕೆ ತಂದಿಲ್ಲ. ಹಾಗಾಗಿ ಹೋರಾಟ ನಡೆಸುವುದು ಅನಿವಾರ್ಯ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಹಾಸಭಾದ ಪದಾಧಿಕಾರಿಗಳಾದ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಶ್ರೀ ಬಸವಮೂರ್ತಿ ಕುಂಬಾರ ಗುಂಡಯ್ಯ ಸ್ವಾಮೀಜಿ, ಶ್ರೀ ಮರುಳ ಶಂಕರ ಸ್ವಾಮೀಜಿ ಉಪಸ್ಥಿತರಿದ್ದರು.


**24x7 CAR TAXI**
ಕಾರ್, ಬಾಡಿಗೆಗೆ
ಸಂಪರ್ಕಿಸಿ :
86609 98651
97436 54365

**ಬೇಕಾಗಿದ್ದಾರೆ**
ಪದವಿವುಳ್ಳ ಅಭ್ಯರ್ಥಿ ಉತ್ತಮ ಸಂಭಾಷಣೆಗಾರರು ಹಾಗೂ ಅನುಭವಿ ಕಂಪ್ಯೂಟರ್ ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್, ಟೆಲಿ ಕಾಲಿಂಗ್ ಅಭ್ಯರ್ಥಿಗಳು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ ಎಂ.ಇ.ಎಸ್. ಪದವಿ ಪೂರ್ವ ಕಾಲೇಜ್, ಆಂಜನೇಯ ಬಡಾವಣೆ, 9ನೇ ತಿರುವು, ದಾವಣಗೆರೆ.
9880436414, 9880030171

**ಹೊಸ ಮನೆ ಮಾರಾಟಕ್ಕಿದೆ**
ಹೊಸ ಡೂಪ್ಲೆಕ್ಸ್ ಮನೆ ಮಾರಾಟಕ್ಕಿದೆ. ಸ್ಥಳ : ಆರ್.ಟಿ.ಓ. ಆಫೀಸ್ ಎದುರು, BSNL ಆಫೀಸ್ ಹಿಂಭಾಗ, ಪಿ.ಬಿ. ರೋಡ್, ದಾವಣಗೆರೆ.
74114 72169

**WANTED**
Any Degree with Computer knowledge is must. for Male & Female.
**Contact : Exllent Electronics**
#2137/1, 4th Main, 3rd Cross, MCC `A' Block, Davanagere - 577004
98865 15100

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಪಾಳೆಯಕ್ಕೆ ಸೂಪರ್ ವೈಸರ್ ಮತ್ತು ರೂಂ ಬಾಯ್ ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ :
63639-54459


## ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ದಾವಣಗೆರೆ ಸಿಟಿ ಎಂ.ಸಿ.ಸಿ. ಬಿ ಬ್ಲಾಕ್, 8ನೇ ಮೇನ್, 5ನೇ ಕ್ರಾಸ್, ಡೋರ್ ನಂ. 3629 ವಾಸಿ 80 ವರ್ಷ ವಯಸ್ಸಿನ **ಶ್ರೀ ಜೆ. ಮಲ್ಲಿಕಾರ್ಜುನಪ್ಪ** ಬಿನ್ ಲೇಟ್ ಶ್ರೀ ದೊಡ್ಡ ಕಾಳಪ್ಪ ಇವರು

ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದಲ್ಲಿ ವಾಸವಾಗಿರುವ ದಿವಂಗತ ಶ್ರೀ ಜೆ. ವರ್ಧಮಾನಪ್ಪ ಬಿನ್ ಶ್ರೀ ಹೇಮಪ್ಪ ಇವರ ವಾರಸುದಾರರಾದ :- (1) **ಶ್ರೀಮತಿ ಲೀಲಾವತಿ ಜೆ.** ಕೋಂ ಲೇಟ್ ಶ್ರೀ ಜೆ. ವರ್ಧಮಾನಪ್ಪ, 78 ವರ್ಷ, ವಾಸ; ಪಿ.ಬಿ. ರಸ್ತೆ, ದೊಡ್ಡಬಾತಿ ಗ್ರಾಮ, ದಾವಣಗೆರೆ ತಾಲ್ಲೂಕು. (2)**ಶ್ರೀ ಹೆಚ್. ವಿ. ಸಂಪತ್ ಕುಮಾರ್** ಬಿನ್ ಲೇಟ್ ಶ್ರೀ ಜೆ. ವರ್ಧಮಾನಪ್ಪ, 54 ವರ್ಷ, ವಾಸ; ಪಿ.ಬಿ. ರಸ್ತೆ, ದೊಡ್ಡಬಾತಿ ಗ್ರಾಮ, ದಾವಣಗೆರೆ ತಾಲ್ಲೂಕು. (3)**ಶ್ರೀ ಹೆಚ್. ವಿ. ಹೇಮಂತ್ ಕುಮಾರ್** ಬಿನ್ ಲೇಟ್ ಶ್ರೀ ಜೆ. ವರ್ಧಮಾನಪ್ಪ, ಇವರು ನಿಧನ ಹೊಂದಿದ್ದು, ಅವರ ವಾರಸುದಾರರಾದ- (A) **ಶ್ರೀಮತಿ ರೂಪಾ** ಕೋಂ, ಲೇಟ್ ಶ್ರೀ ಹೆಚ್.ವಿ. ಹೇಮಂತ್ ಕುಮಾರ್, ವಯಸ್ಸು 38 ವರ್ಷ, ವಾಸ; ಪಿ.ಬಿ. ರಸ್ತೆ, ದೊಡ್ಡಬಾತಿ ಗ್ರಾಮ, ದಾವಣಗೆರೆ ತಾಲ್ಲೂಕು. (B) **ಚಿ. ಹೆಚ್.ಆರ್. ಮಿಥುನ್ ಜೈನ್** ಬಿನ್ ಲೇಟ್ ಶ್ರೀ ಹೆಚ್.ವಿ. ಹೇಮಂತ್ ಕುಮಾರ್, ವಯಸ್ಸು 14 ವರ್ಷ, ವಾಸ: ಪಿ.ಬಿ. ರಸ್ತೆ, ದೊಡ್ಡ ಬಾತಿ ಗ್ರಾಮ, ದಾವಣಗೆರೆ ತಾಲ್ಲೂಕು. ಇವರು ಮೈನರ್ ಇದ್ದು, ಇವರ ಪರವಾಗಿ ಅವರ ಜನಕ ತಾಯಿ ಶ್ರೀಮತಿ ರೂಪಾ ಕೋಂ ಲೇಟ್ ಶ್ರೀ ಹೆಚ್. ವಿ. ಹೇಮಂತ್ ಕುಮಾರ್. (C) **ಕುಮಾರಿ. ಹೆಚ್. ಆರ್. ಮೋಕ್ಷ ಜೈನ್** ಬಿನ್ ಲೇಟ್ ಶ್ರೀ ಹೆಚ್.ವಿ. ಹೇಮಂತ್ ಕುಮಾರ್, ವಯಸ್ಸು 12 ವರ್ಷ, ವಾಸ; ಪಿ.ಬಿ. ರಸ್ತೆ, ದೊಡ್ಡಬಾತಿ ಗ್ರಾಮ, ದಾವಣಗೆರೆ ತಾಲ್ಲೂಕು. ಇವರು ಮೈನರ್ ಇದ್ದು, ಇವರ ಪರವಾಗಿ ಅವರ ಜನಕ ತಾಯಿ ಶ್ರೀಮತಿ ರೂಪಾ ಕೋಂ ಲೇಟ್ ಶ್ರೀ ಹೆಚ್.ವಿ. ಹೇಮಂತ್ ಕುಮಾರ್. (4 )**ಶ್ರೀ ಎ. ಹೆಚ್. ಕಿರಣ್ ಕುಮಾರ್** ಬಿನ್ ಲೇಟ್ ಶ್ರೀ ಜೆ. ವರ್ಧಮಾನಪ್ಪ, 50 ವರ್ಷ, ವಾಸ; ಪಿ.ಬಿ. ರಸ್ತೆ, ದೊಡ್ಡ ಬಾತಿ ಗ್ರಾಮ, ದಾವಣಗೆರೆ ತಾಲ್ಲೂಕು. (5) **ಶ್ರೀಮತಿ ರೇಖಾ ಗುಣಪಾಲ್** ಕೋಂ, ಶ್ರೀ ರಾಜೇಂದ್ರ ಆರ್. ಗುಣಪಾಲ್, 48 ವರ್ಷ, ವಾಸ, ಎ- 205, ವಿಲ್ಸನ್ ವಿಂಟೇಜ್, 24, 8ನೇ ಮುಖ್ಯ ರಸ್ತೆ, 1ನೇ ಕ್ರಾಸ್, ವಿಲ್ಸನ್ ಗಾರ್ಡನ್, ಆಡುಗೋಡಿ ಪೋಸ್ಟ್ ಆಫೀಸ್ ಹಿಂಭಾಗ, ಬೆಂಗಳೂರು-ದಕ್ಷಿಣ, ಬೆಂಗಳೂರು-560 027

ಇವರುಗಳಿಂದ, ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ 'ಹಳೇಯ ಮನೆ ಮತ್ತು ಖಾಲಿ ನಿವೇಶನವನ್ನು' ಕ್ರಯಕ್ಕೆ ಕೊಳ್ಳಲು ಉದ್ದೇಶಿಸಿ ಕ್ರಯ ಕರಾರು ಪತ್ರವನ್ನು ದಿನಾಂಕ; 23-01-2024 ಮಾಡಿಕೊಂಡಿರುತ್ತಾರೆ.

ಕಾರಣ ಈ ಬಗ್ಗೆ ಯಾವುದೇ ವ್ಯಕ್ತಿ ಕಾನೂನು ಪ್ರಕಾರ ಆಕ್ಷೇಪಣೆ/ತಕರಾರು ಹೊಂದಿದ್ದಲ್ಲಿ ಅದನ್ನು ಈ ಪ್ರಕಟಣೆ ನೀಡಿದ 15 ದಿವಸಗಳಲ್ಲಿ ನಮ್ಮ ಕಛೇರಿಗೆ ಸಲ್ಲಿಸತಕ್ಕದ್ದು. ಇಲ್ಲದಿದ್ದಲ್ಲಿ, ನಮ್ಮ ಕಕ್ಷಿದಾರರುಗಳು ಕ್ರಯದ ಬಗ್ಗೆ ಮುಂದುವರೆಯುವವರಿದ್ದಾರೆ ತಿಳಿಯಿರಿ.

**ಷೆಡ್ಯೂಲ್ :** ದಾವಣಗೆರೆ ಹಿರಿಯ ಉಪ-ನೋಂದಣಾಧಿಕಾರಿಗಳವರ ಆಫೀಸಿನ ಅಧಿಕಾರಕ್ಕೆ ಒಳಪಟ್ಟ, ದಾವಣಗೆರೆ ತಾಲ್ಲೂಕು ದೊಡ್ಡ ಬಾತಿ ಗ್ರಾಮದ ಖಾನೇಷುಮಾರಿ ನಂ. 99/2 (ತೊಂಬತ್ತೊಂಬತ್ತು ಸಬ್ ನಂಬರ್ ಎರಡು) ವುಳ್ಳ, ದೊಡ್ಡಬಾತಿ ಗ್ರಾಮ ಪಂಚಾಯ್ತಿಯ ನಮೂನೆ - II - ಬಿ ಪ್ರಕಾರ ಈ-ಸ್ವತ್ತಿನ ಸಂಖ್ಯೆ 151200201400122595 ವುಳ್ಳ, ಕಟ್ಟಡದ ಅಳತೆ, 118.92 ಚದರ ಮೀಟರ್ ಮತ್ತು ನಿವೇಶನದ ಅಳತೆ 334.45 ಚದರ ಮೀಟರ್ ವುಳ್ಳ, ಒಟ್ಟಾರೆ ಪೂರ್ವ-ಪಶ್ಚಿಮ; 13.716000000000001 ಮೀಟರ್ ಮತ್ತು ಉತ್ತರ ದಕ್ಷಿಣ; 24.384 ಮೀಟರ್ ಅಂದರೆ ಪೂರ್ವ-ಪಶ್ಚಿಮ; 45 ಅಡಿ (ನಲವತ್ತೈದು ಅಡಿ) ಮತ್ತು ಉತ್ತರ-ದಕ್ಷಿಣ; 80 ಅಡಿ (ಎಂಬತ್ತು ಅಡಿ) ವುಳ್ಳ ಜಾಗ ಮತ್ತು ಸದರಿ ಜಾಗದಲ್ಲಿರುವ ಪೂರ್ವ-ಪಶ್ಚಿಮ; 32 ಅಡಿ (ಮೂವತ್ತೆರಡು ಅಡಿ) ಮತ್ತು ಉತ್ತರ-ದಕ್ಷಿಣ; 40 ಅಡಿ (ನಲವತ್ತು ಅಡಿ) ಅಳತೆ ಇರುವ ಮಂಗಳೂರು ಹಂಚಿನ ಮನೆ ಒಳಗೊಂಡಿರುವ ಒಟ್ಟಾರೆ ಸ್ವತ್ತಿಗೆ ಚಕ್ಕುಬಂದಿ; ಪೂರ್ವಕ್ಕೆ; ಇದೇ ನಂಬರ್ ಪೈಕಿ ಸ್ವತ್ತು ಅಂದರೆ ಶ್ರೀ ಕೆ. ಹನುಮಂತಪ್ಪ ಇವರ ಮನೆ, ಪಶ್ಚಿಮಕ್ಕೆ ಚರಂಡಿ ಮತ್ತು ಎ.ಕೆ. ಕಾಲೋನಿ ರಸ್ತೆ, ಉತ್ತರಕ್ಕೆ ಎ.ಕೆ. ಕಾಲೋನಿ ಬಾವಿಗೆ ಹೋಗುವ ದಾರಿ, ದಕ್ಷಿಣಕ್ಕೆ; ಮೇನ್ ರೋಡ್ ಅಂದರೆ ಪಿ.ಬಿ. ರಸ್ತೆ ಈ ಮಧ್ಯದಲ್ಲಿರುವ 70 ವರ್ಷ ಹಳೆಯದಾದ ಮಂಗಳೂರು ಹಂಚಿನಮನೆ ಮತ್ತು ಉಳಿದ ಖಾಲಿ ನಿವೇಶನ ಮಾತ್ರ, ಕ್ರಯ ಕರಾರು ಪತ್ರಕ್ಕೆ ಒಳಪಟ್ಟಿರುತ್ತದೆ.

**ಶ್ರೀ ಹೆಚ್. ಎಸ್. ಯೋಗೇಶ್**, ವಕೀಲರು,
ಡೋರ್ ನಂ. 154, ಮೊದಲ ಮಹಡಿ, ಕಾನ್ವೆಂಟ್ ರಸ್ತೆ, 3ನೇ ಮೇನ್,
ಪಿ.ಜೆ. ಬಡಾವಣೆ, ದಾವಣಗೆರೆ-577 002. ಫೋ : 98442-41616

(ಶ್ರೀ ಜೆ. ಮಲ್ಲಿಕಾರ್ಜುನಪ್ಪ)


**WANTED**
Experienced Salesman and Sales Girls (B.Com/MBA) Accountant
***Samyak Ceramics***
Hadadi Road,Davangere
91106 41670

**WANTED STENO**
Male Steno to Advocate Office
**MALVI LAW ASSOCIATES**
#3693, MCC `A' Block, DVG,
98451 90787, 98456 44100

**AVOID MOSQUITOES**
Mosquito Net For Doors & Windows
**SRI GOWRI ENTERPRISES**
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**ಸಪ್ತಭಿ ಆರ್ಕಿಟೆಕ್ಟ್ ಮತ್ತು ಕನ್‌ಸ್ಟ್ರಕ್ಷನ್**
ನಮ್ಮಲ್ಲಿ ಉತ್ತಮ ಬೆಲೆಯಲ್ಲಿ ಮನೆಗಳನ್ನು ಕಟ್ಟಿಕೊಡಲಾಗುವುದು ಮತ್ತು ಇಂಟೀರಿಯರ್ ಮಾಡಿಕೊಡುತ್ತೇವೆ.
**ಆರ್ಕಿಟೆಕ್ಟ್, ಗಗನ್ ದೀಪ್ : 9902521054**
**ಸಿವಿಲ್ ಇಂಜಿನಿಯರ್ ರಂಜಿತ್ : 9686093228**
ಆಫೀಸ್ ವಿಳಾಸ : 616/2, 2ನೇ ಮೇನ್, 9ನೇ ಕ್ರಾಸ್, ಆಂಜನೇಯ ದೇವಸ್ಥಾನದ ಎದುರು ಅಮೃತ ವಿದ್ಯಾಲಯ ಶಾಲೆ ಹತ್ತಿರ ಎಸ್.ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ.**
ಸರ್ಕಾರಿ ನೌಕರರ ಬಡಾವಣೆಯಲ್ಲಿ ಬಿ ಬ್ಲಾಕ್ 30x50, 30x40 ಪೂರ್ವ, ಎಸ್.ಎಸ್. ಬಡಾವಣೆಯ ಬಿ ಬ್ಲಾಕ್‌ನಲ್ಲಿ 40x60 ದಕ್ಷಿಣ ಶ್ರೀ ಸಾಮಾನ್ಯದಲ್ಲಿ 30x43 ಉತ್ತರ 40 ಅಡಿ ರಸ್ತೆಗೆ, ಬೈಪಾಸ್ ಸರ್ವೀಸ್ ರಸ್ತೆಗೆ, 30x55 ದಕ್ಷಿಣ (ಕಮರ್ಷಿಯಲ್) ಸರ್ಕಾರಿ ನೌಕರರ ಪಕ್ಕದ ಬಡಾವಣೆಯಲ್ಲಿ 30x40 ಪೂರ್ವ 2 ಸೈಟ್‌ಗಳು ಮಾರಾಟಕ್ಕೆ ಇವೆ.
ಸಂಪರ್ಕಿಸಿ. ಸುರೇಶ್ ಪಿ.ಎಸ್. ಶಾಮನೂರು
84314 00907

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

**ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.**
**ಡಾ|| ಎಚ್.ಆಯ್. ದೊಡ್ಡಮನಿ** (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710


**ಹೆಸರು ಸ್ಪಷ್ಟೀಕರಣ**

ನಾನು ತಿನೇಶ್ ಕುಮಾರ್ (Tinesh Kumar) ಬಿನ್ ನರೇಂದರ್‌ಕುಮಾರ್ 46 ವರ್ಷ, ವಾಸ 544/30 A 1ನೇ ಮಹಡಿ, 1ನೇ ಕ್ರಾಸ್, ಯಲ್ಲಮ್ಮ ಕೃಪಾ ಆಂಜನೇಯ ಬಡಾವಣೆ, ದಾವಣಗೆರೆ ವಾಸಿಯಾದ ನಾನು ನನ್ನ ಆಧಾರ್ ಕಾರ್ಡ್‌ನಲ್ಲಿ ಈ ಮೇಲ್ಕಂಡಂತೆ ಹೆಸರಿದ್ದು, ಪಾನ್ ಕಾರ್ಡ್‌ನಲ್ಲಿ ತಿನೇಶ್‌ಕುಮಾರ್ (Tinesh Kumar) ಬದಲಿಗೆ ತಿನೇಶ್ (Tinesh) ಎಂದು ತಪ್ಪಾಗಿ ನಮೂದಾಗಿದೆ. ಆದ್ದರಿಂದ ದಿ. : 9.2.2024ರಂದು ನೋಟರಿ ದಾವಣಗೆರೆಯವರ ಸಮಕ್ಷಮ ನನ್ನ ಹೆಸರು ಇನ್ನು ಮುಂದೆ ನನ್ನ ಎಲ್ಲಾ ದಾಖಲೆಗಳಲ್ಲೂ ತಿನೇಶ್ ಕುಮಾರ್ (Tinesh Kumar) ಎಂಬ ಹೆಸರಿನಲ್ಲಿ ಮುಂದುವರೆಯುತ್ತೇನೆಂದು ಪ್ರಮಾಣ ಮಾಡಿದ್ದೇನೆ.

ಸಹಿ/- ತಿನೇಶ್‌ಕುಮಾರ್


**ಬೇಕಾಗಿದ್ದಾರೆ**
ಪೈಪ್ ಮತ್ತು ಸ್ಯಾನಿಟರಿ ಶೋರೂಂನಲ್ಲಿ Tally ಗೊತ್ತಿರುವ ಅಕೌಂಟೆಂಟ್ ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ:
**ಮಾಗನೂರು ಎಂಟರ್ ಪ್ರೈಸಸ್**
ರೆಡ್ಡಿ ಬಿಲ್ಡಿಂಗ್ ಹತ್ತಿರ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ.
9743636000, 8197696774

**ಬೇಕಾಗಿದ್ದಾರೆ**
ITI / Diploma ಮಾಡಿದವರು ಬೇಕಾಗಿದ್ದಾರೆ. Solar Plant Maintenance ಮಾಡಲು ಆಸಕ್ತಿಯುಳ್ಳವರು ಸೈಟ್ ವಿಸಿಟ್ ಮಾಡಬೇಕಾಗಿ ವಿನಂತಿ. ಲೋಕಿಕೆರೆ ರಸ್ತೆ, ಹನುಮಾಪುರ, ಬೆಳವನೂರು, ದಾವಣಗೆರೆ.
94499 61819, 08192 261819

**ಬೇಕಾಗಿದ್ದಾರೆ**
ಫರ್ನಿಚರ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಯೋಮಿತಿ 21 ರಿಂದ 30 ವರ್ಷ, ಸ್ಥಳ : ದಾವಣಗೆರೆ.
86182 60719

**ಬೇಕಾಗಿದ್ದಾರೆ**
ಕಿರಾಣಿ ಅಂಗಡಿ ಕೆಲಸಕ್ಕೆ ಅನುಭವ ಉಳ್ಳವರು ಬೇಕಾಗಿದ್ದಾರೆ.
**ಶ್ರೀ ಗುರು ಕೊಟ್ಟೂರೇಶ್ವರ ಪ್ರಾವಿಜನ್ ಸ್ಟೋರ್**
ಐ.ಟಿ.ಐ ಕಾಲೇಜು, # 617/6, 60 ಅಡಿ ರೋಡ್ ನಿಟ್ಟುವಳ್ಳಿ, ದಾವಣಗೆರೆ-577005.
95919 21004,73381 00402

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ಬೇಕಾಗಿದ್ದಾರೆ**
ಆನಗೋಡು ಸಮೀಪ NH-48ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಆನಗೋಡು ಸುತ್ತ-ಮುತ್ತ ಇರುವ ಉತ್ಸಾಹಿ ಯುವಕರು ಬೇಕಾಗಿದ್ದಾರೆ, ಮತ್ತು ಬಂಕ್‌ನಲ್ಲಿ ಕ್ಲೀನಿಂಗ್ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ. ಸಂಪರ್ಕಿಸಿ :
90082 28222, 99001 42052

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ನೇರ ಪರೀಕ್ಷೆಗಳು**
**SSLC , PUC**
**NTC** - ನರ್ಸರಿ ಟೀಚರ್ಸ್ ಟ್ರೇನಿಂಗ್
**BA, B.Com, MA, M.Com, MBA (ALL),**
**ಶ್ರೀ ಗಂಗೋತ್ರಿ ಕರಸ್ಪಾಂಡೆನ್ಸ್ ಕಾಲೇಜ್**
ಮೋತಿ ಸ್ವೀಟ್ಸ್/ ಟ್ರೆಂಡ್ಸ್ ಪಕ್ಕ, ಪಿ.ಬಿ. ರಸ್ತೆ, ದಾವಣಗೆರೆ
86602 35013

**ವಾಣಿಜ್ಯ ಮಳಿಗೆ ಬಾಡಿಗೆಗಿದೆ**
**ಲಕ್ಷ್ಮೀ ಪ್ಲಾಜಾ,** ಚಾಮರಾಜ ಪೇಟೆ, ರವಿತೇಜ ಕಿಡ್ಸ್ ಎದುರು, ದಾವಣಗೆರೆ-1.
09x28 ಅಳತೆಯ ಗ್ರೌಂಡ್ ಫ್ಲೋರ್ ಮತ್ತು 1ನೇ ಮಹಡಿ ಬಾಡಿಗೆಗೆ ಇದೆ.
90085 77729

# ಕೇಂದ್ರವೂ ಅನುದಾನದಲ್ಲಿ ಪರಿಶಿಷ್ಟರಿಗೆ ಮೀಸಲಿಡಲಿ



(1ನೇ ಪುಟದಿಂದ) ವರಿಗೆ ಅನುದಾನದಲ್ಲಿ ಮೀಸಲಾತಿ ನೀಡಲಾಗಿದೆ. ಆದರೆ, ಕೇಂದ್ರ ಸರ್ಕಾರ ಈ ರೀತಿ ಕ್ರಮ ತೆಗೆದುಕೊಂಡಿಲ್ಲ ಎಂದರು.

ಸಾಮಾಜಿಕ ನ್ಯಾಯ, ರಾಷ್ಟ್ರಭಕ್ತಿ ಹಾಗೂ ಬದಲಾವಣೆಯ ಬಗ್ಗೆ ಭಾಷಣ ಮಾಡುವವರು ಪರಿಶಿಷ್ಟರಿಗೆ ಅನುದಾನದಲ್ಲಿ ಮೀಸಲಾತಿ ಕಲ್ಪಿಸಬೇಕು. ಏಕೆ ಇದುವರೆಗೂ ಇಂತಹ ಕ್ರಮ ತೆಗೆದುಕೊಂಡಿಲ್ಲ? ಬರಿ ಬಾಯಿ ಭಾಷಣದಲ್ಲಿ ಪರಿಶಿಷ್ಟರು ಮೇಲೆ ಬರಲು ಸಾಧ್ಯವಿಲ್ಲ ಎಂದು ಸಿದ್ದರಾಮಯ್ಯ ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಪರಿಶಿಷ್ಟರಿಗೆ ಕೆ.ಐ.ಎ.ಡಿ.ಬಿ.ದಲ್ಲಿ ಜಮೀನು ಮೀಸಲಿಡಬೇಕು.

ಕೆ.ಎಸ್.ಎಫ್.ಸಿ.ಯಲ್ಲಿ ಹೆಚ್ಚು ಸಾಲ ನೀಡಬೇಕು. ದೇವನಹಳ್ಳಿ ಬಳಿ ವಾಲ್ಮೀಕಿ ಪೀಠಕ್ಕೆ ಜಾಗ ನೀಡಬೇಕು ಎಂದು ಒತ್ತಾಯಿಸಿದರು.

ಗೃಹ ಸಚಿವ ಜಿ. ಪರಮೇಶ್ವರ್ ಮಾತನಾಡಿ, ಶ್ರೀ ವಾಲ್ಮೀಕಿ ಪ್ರಸನ್ನಾನಂದಪುರಿ ಸ್ವಾಮೀಜಿ ಮೀಸಲಾತಿ ಹೆಚ್ಚಳಕ್ಕಾಗಿ ಹೋರಾಟ ನಡೆಸುವಾಗ ಅವರನ್ನು ಭೇಟಿ ಮಾಡಲು ಕರೆದಾಗ, ಆಗಿನ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಬರಲಿಲ್ಲ. ನಾನೇ ಭೇಟಿ ನೀಡಿ ಮೀಸಲಾತಿ ಹೆಚ್ಚಿಸುವ ಭರವಸೆ ಕೊಟ್ಟಿದ್ದೆ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವ ಬಿ. ನಾಗೇಂದ್ರ, ವಾಲ್ಮೀಕಿ ಸಮುದಾಯದವರು ಮೇಲರಿಮೆ ಬೆಳೆಸಿಕೊಂಡು ಮುಖ್ಯವಾಹಿನಿಗೆ ಬರಬೇಕು. ಹಕ್ಕುಗಳಿಗೆ ಒಂದಾಗಿ ಹೋರಾಟ ನಡೆಸಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಆಂಧ್ರ ಪ್ರದೇಶದ ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ತೇಜಸ್ವಿ ಕಟ್ಟಿಮನಿ ಅವರಿಗೆ ವಾಲ್ಮೀಕಿ ರತ್ನ ಪ್ರಶಸ್ತಿ ಹಾಗೂ ಸಾಹಿತಿ ಬಿ.ಎಲ್. ವೇಣು ಅವರಿಗೆ ಮದಕರಿ ನಾಯಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.


ವಾಲ್ಮೀಕಿ ಗುರುಪೀಠದ ಜಗದ್ಗುರು ಶ್ರೀ ಪ್ರಸನ್ನಾನಂದ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು.

ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಉಪಸ್ಥಿತರಿದ್ದರು.

ವೇದಿಕೆಯ ಮೇಲೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಹಕಾರ ಸಚಿವರೂ ಆದ ಮಹರ್ಷಿ ವಾಲ್ಮೀಕಿ ಜಾತ್ರಾ ಸಮಿತಿ ಅಧ್ಯಕ್ಷ ಕೆ.ಎನ್. ರಾಜಣ್ಣ, ಆಹಾರ ಸಚಿವ ಕೆ.ಹೆಚ್. ಮುನಿಯಪ್ಪ, ಶಾಸಕರಾದ ಕೆ.ಎಸ್. ಬಸವಂತಪ್ಪ, ಬಸವನಗೌಡ ತುರುವಿಹಾಳ್, ಬಸವನಗೌಡ ದದ್ದಲ್, ರಘುಮೂರ್ತಿ, ಎನ್.ವೈ. ಗೋಪಾಲಕೃಷ್ಣ, ಇ. ತುಕಾರಾಮ್, ಎನ್.ಟಿ. ಶ್ರೀನಿವಾಸ್, ಪರಿಷತ್ ಸದಸ್ಯ ಎಂ.ವೈ. ಗೋಪಾಲಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

# ರಾಮರಾಜ್ಯ ಬರಬೇಕಿದೆ ಎಂದ ಸಿಎಂ

## ರಾಮ ಮಂದಿರ ಪಕ್ಕದಲ್ಲೇ ವಾಲ್ಮೀಕಿ ಮಂದಿರ ಎಂದ ಸಚಿವ ರಾಜಣ್ಣ



ಹರಿಹರ, ಫೆ. 9 - ರಾಜನಹಳ್ಳಿಯ ಮಹರ್ಷಿ ವಾಲ್ಮೀಕಿ ಗುರುಪೀಠದಲ್ಲಿ ಆಯೋಜಿಸಲಾಗಿದ್ದ ಜನ ಜಾಗೃತಿ ಜಾತ್ರಾ ಮಹೋತ್ಸವದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವರು ರಾಮ, ರಾಮರಾಜ್ಯ ಮತ್ತು ರಾಮಾಯಣ ಪಠಣದ ಪ್ರಸ್ತಾಪ ಮಾಡಿದರು.

ಶ್ರೀ ರಾಮಚಂದ್ರನ ಆಸ್ಥಾನ ಹಾಗೂ ರಾಜ್ಯ ಈಗಿನ ಪ್ರಜಾಪ್ರಭುತ್ವದ ರೀತಿ ಇತ್ತು. ರಾಮ ರಾಜ್ಯವು ವರ್ಗ - ಜಾತಿ ರಹಿತವಾಗಿತ್ತು. ಎಲ್ಲರಿಗೂ ಸಮಾನ ಅವಕಾಶಗಳಿರುವ ವ್ಯವಸ್ಥೆ ಅವತ್ತೇ ನೋಡಲು ಸಾಧ್ಯವಾಗಿತ್ತು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.

ವರ್ಗ - ಜಾತಿ ರಹಿತ, ಸರ್ವರಿಗೂ ಸಮಾನ ಅವಕಾಶಗಳಿರುವ ಸಮಾಜವೇ ರಾಮ ರಾಜ್ಯ. ಹೀಗಾಗಿ ಇವತ್ತೂ ರಾಮ ರಾಜ್ಯ ಬರಬೇಕಿದೆ. ಜಾತಿ - ವರ್ಗ ರಹಿತ ಸಮಾಜ ನಿರ್ಮಾಣವಾಗಬೇಕಿದೆ ಎಂದು ಹೇಳಿದರು.

ಸಹಕಾರ ಸಚಿವರೂ ಆದ ಮಹರ್ಷಿ ವಾಲ್ಮೀಕಿ ಜಾತ್ರಾ ಸಮಿತಿ ಅಧ್ಯಕ್ಷ ಕೆ.ಎನ್. ರಾಜಣ್ಣ ಮಾತನಾಡಿ, ರಾಮಾಯಣದ ಮೂಲಕ ರಾಮರಾಜ್ಯದ ಪರಿಕಲ್ಪನೆ ಕೊಟ್ಟಿದ್ದು ಮಹರ್ಷಿ ವಾಲ್ಮೀಕಿ. ಆ ರಾಮರಾಜ್ಯದ ಕನಸು ಸಾಕಾರ ಮಾಡುತ್ತಿರುವುದು ಸಿದ್ದರಾಮಯ್ಯ ಎಂದರು.

ಇಡೀ ಭೂಮಂಡಲಕ್ಕೆ ಶ್ರೀರಾಮನನ್ನು ಪರಿಚಯಿಸಿದವರು ಮಹರ್ಷಿ ವಾಲ್ಮೀಕಿ. ಅವರು ರಾಮಾಯಣ ಬರೆಯದೇ ಇದ್ದರೆ ಶ್ರೀರಾಮನ ಪರಿಚಯವೇ ಆಗುತ್ತಿರಲಿಲ್ಲ ಎಂದೂ ಹೇಳಿದರು. ಅಯೋಧ್ಯೆಯಲ್ಲಿ ಮೊದಲು ವಾಲ್ಮೀಕಿ ಮಂದಿರ ಕಟ್ಟುತ್ತಾರೆ ಎಂದು ಕೊಂಡಿದ್ದೆವು. ನಮ್ಮೆಲ್ಲರ ನಿರೀಕ್ಷೆ ಹುಸಿಯಾಗಿದೆ. ಅಲ್ಲಿ ಶ್ರೀರಾಮ ಮಂದಿರದ ಪಕ್ಕದಲ್ಲೇ ಭವ್ಯ ವಾಲ್ಮೀಕಿ ಮಂದಿರ ಕಟ್ಟುವುದು ನಮ್ಮ ಗುರಿ ಎಂದು ತಿಳಿಸಿದರು.

ಗೃಹ ಸಚಿವ ಜಿ. ಪರಮೇಶ್ವರ್ ಮಾತನಾಡಿ, ಸಂಬಂಧ ಇಲ್ಲದೇ ಇರುವವರು ವಾಲ್ಮೀಕಿ ಹಾಗೂ ರಾಮನ ಹೆಸರಿನಲ್ಲಿ ಏನೇನೋ ಮಾಡುತ್ತಿದ್ದಾರೆ. ಆದರೆ, ನಮಗೆ ಸಂಬಂಧ ಇದೆ. ಈ ಸಂದೇಶ ನೀಡುವ ಸಲುವಾಗಿ ರಾಜ್ಯದಲ್ಲಿ ವಾಲ್ಮೀಕಿ ಹೆಸರಿನಲ್ಲಿ ವಿಶ್ವವಿದ್ಯಾಲಯ ಸ್ಥಾಪಿಸಬೇಕು ಎಂದು ಆಗ್ರಹಿಸಿದರು.

ಆಹಾರ ಸಚಿವ ಕೆ.ಹೆಚ್. ಮುನಿಯಪ್ಪ ಮಾತನಾಡಿ, ಬಿಜೆಪಿಯವರು ರಾಮನ ಬಗ್ಗೆ ಮಾತನಾಡುತ್ತಾರೆ. ಆದರೆ, ಅವರಲ್ಲಿ ಎಷ್ಟು ಜನ ರಾಮಾಯಣ ಪಠಣ ಮಾಡುತ್ತಾರೆ? ನಾನು ಪ್ರತಿ ವರ್ಷ ಎರಡು ಬಾರಿ ರಾಮಾಯಣದ ಶ್ರೇಷ್ಠ ಅಧ್ಯಾಯವಾದ ಸುಂದರಕಾಂಡ ಅಧ್ಯಯನ ಮಾಡುತ್ತೇನೆ ಎಂದರು.

ಬಿಜೆಪಿ ರಾಮನ ಹೆಸರಿನಲ್ಲಿ ರಾಜಕಾರಣ ಮಾಡುತ್ತಿದೆ. ನಾವೆಲ್ಲ ರಾಮ ಭಕ್ತರೇ, ನಾವು ರಾಮನ ಪೂಜೆ ಮಾಡುತ್ತೇವೆ. ಆದರೆ, ರಾಮ - ರಹೀಮರಿಬ್ಬರನ್ನೂ ಪ್ರೀತಿ - ವಾತ್ಸಲ್ಯದಿಂದ ಕಾಣುತ್ತೇವೆ ಎಂದು ಹೇಳಿದರು.

ಅಮೃತ್‌ಸರ್ ಬಳಿಯ ರಾಮ ತೀರ್ಥದಲ್ಲಿ ಭವ್ಯ ಮಂದಿರ ಇದೆ. ಇದು ರಾಮಾಯಣ ಕಾಲದಲ್ಲಿ ಮಹರ್ಷಿ ವಾಲ್ಮೀಕಿ ಆಶ್ರಮವಾಗಿತ್ತು ಎಂಬ ಪ್ರತೀತಿ ಇದೆ. ಇಲ್ಲಿ ಸೀತಾ ಮಾತೆ ಆಶ್ರಯ ಪಡೆದಿದ್ದರು ಹಾಗೂ ಲವ - ಕುಶ ಜನಿಸಿದ್ದರು. ಇಲ್ಲಿ ಅತ್ಯಂತ ನೈಜ ಸ್ವರೂಪದ ವಾಲ್ಮೀಕಿ ಪ್ರತಿಮೆ ಇದೆ. ಇದೇ ರೀತಿಯ ಪ್ರತಿಮೆಯನ್ನು ರಾಜನಹಳ್ಳಿ ಗುರುಪೀಠದಲ್ಲೂ ಸ್ಥಾಪಿಸಬೇಕಿದೆ ಎಂದು ಶಾಸಕಿ ಲತಾ ಮಲ್ಲಿಕಾರ್ಜುನ್ ಹೇಳಿದರು.

### ಮೋದಿ ರಾಮ ಮಂದಿರಕ್ಕೆ ವಿರುದ್ಧವಾಗಿ ದಶರಥ ರಾಮ !

ಅಯೋಧ್ಯೆಯಲ್ಲಿರುವುದು ಮೋದಿ ರಾಮ ಮಂದಿರ. ಮೋದಿ ರಾಮ ಮಂದಿರಕ್ಕೆ ವಿರುದ್ಧವಾಗಿ ನಾವು ದಶರಥ ರಾಮ ದೇವಾಲಯಗಳ ರೂಪಿಸಬೇಕಿದೆ ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದ್ದಾರೆ.

ರಾಜ್ಯದಲ್ಲಿ ಶಿಥಿಲವಾಗಿರುವ ಶ್ರೀ ರಾಮನ ದೇವಾಲಯಗಳನ್ನು ಸರ್ಕಾರದ ವತಿಯಿಂದ ಜೀರ್ಣೋದ್ಧಾರ ಮಾಡಬೇಕು. ಅಯೋಧ್ಯೆಯ ಮೋದಿ ರಾಮನ ವಿರುದ್ಧವಾಗಿ ನಾವು ದಶರಥ ರಾಮನ ದೇವಾಲಯಗಳ ಜೀರ್ಣೋದ್ಧಾರ ಮಾಡೋಣ ಎಂದು ರಾಜಣ್ಣ ಹೇಳಿದರು.

# ನಗರದ ಕವಯತ್ರಿ ಸೌಮ್ಯ ದಯಾನಂದ ಅವರ 'ಸಂಜೆ ಐದರ ಸಂತೆ' ಕೃತಿ ಬಿಡುಗಡೆ



ದಾವಣಗೆರೆ, ಫೆ. 9 - ಸ್ಥಳೀಯ ಉದಯೋನ್ಮುಖ ಕವಯತ್ರಿ ಸೌಮ್ಯ ದಯಾನಂದ ಅವರು ರಚಿಸಿರುವ 'ಸಂಜೆ ಐದರ ಸಂತೆ' ಕವನ ಸಂಕಲನವನ್ನು ಇತ್ತೀಚಿಗೆ ಬೆಂಗಳೂರಿನ ಜಯನಗರದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಬಿಡುಗಡೆ ಮಾಡಿದರು.

ಬೆಂಗಳೂರಿನ ಸನ್ ಸ್ಟಾರ್ ಪಬ್ಲಿಷರ್ ಸಂಸ್ಥೆ ಹಮ್ಮಿಕೊಂಡಿದ್ದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಸೌಮ್ಯ ದಯಾನಂದ ಅವರ ಕವನ ಸಂಕಲನ ಬಿಡುಗಡೆ ಮಾಡಿದ ಜಗದ್ಗುರುಗಳು ಮಾತನಾಡಿ, ಕೃತಿಯ ಕುರಿತಂತೆ ಸಂಕಲನದಲ್ಲಿನ 'ಮೌನ' ಎಂಬ ಕವಿತೆಯ ಸಾಲುಗಳನ್ನು ಪ್ರಸ್ತಾಪಿಸಿ, ಮೌನದ ಮೌಲ್ಯದ ಬಗ್ಗೆ ವಿವರಿಸಿದರು. ಈ ಹೊತ್ತಿನ ಮಾತಿನ ದುಂದುಗಾರಿಕೆ ಮತ್ತು ಮೌನದ ಅಗತ್ಯತೆಯ ಬಗ್ಗೆ ತಿಳಿಸಿದ ಅವರು, ಒಬ್ಬ ವ್ಯಕ್ತಿಗೆ ತನಗೆ ತಾನು ಸಿಗುವುದು ಮೌನದಲ್ಲಿಯೇ ಎಂಬುದನ್ನು ಉದಾಹರಿಸಿದರು.

ಮುಖ್ಯ ಅತಿಥಿಗಳಾಗಿ ಬೆಂಗಳೂರು ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕ ಡಾ. ಸತೀಶ್ ಕುಮಾರ್ ಎಸ್. ಹೊಸಮನಿ, ಸನ್ ಸ್ಟಾರ್ ಪಬ್ಲಿಷರ್ ಸಂಸ್ಥೆ ನಿರ್ದೇಶಕ ಡಿ. ಎನ್. ಶೇಖರ್ ರೆಡ್ಡಿ, ಖ್ಯಾತ ಸಾಹಿತಿ ಡಾ. ಸಿ. ಎನ್. ರಾಮಚಂದ್ರನ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ. ರಾಜಕುಮಾರ್, ಖ್ಯಾತ ಲೇಖಕರಾದ ಷಡಕ್ಷರಿ, ಶ್ರೀಮತಿ ಪ್ರಮೀಳಮ್ಮ, ಖ್ಯಾತ ಲೇಖಕ ಶೆಣೈ, ಸಂಸ್ಕೃತ ವಿದ್ವಾಂಸ ಸತೀಶ್ ಹೆಗ್ಗಡೆ, ಮತ್ತು ಕವಯತ್ರಿ ಸೌಮ್ಯ ಮತ್ತು ಎಲ್. ದಯಾನಂದ ಉಪಸ್ಥಿತರಿದ್ದರು.

ದಾವಣಗೆರೆ ನಗರದಲ್ಲಿ ವಾಸವಾಗಿರುವ, ಪ್ರಸ್ತುತ ಜಗಳೂರು ತಾಲ್ಲೂಕು ದಿದ್ದಿಗೆ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಕನ್ನಡ ಭಾಷಾ ಶಿಕ್ಷಕಿಯಾಗಿರುವ ಸೌಮ್ಯ ಅವರು ಮೂಲತಃ ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕಿನ ಹೂವಿನ ಹೊಳೆ ಗ್ರಾಮದವರು. ಇವರ ಹಲವಾರು ಲೇಖನಗಳು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಕವಿತೆಯ ಜೊತೆಗೆ ಪುಟ್ಟ ಕಥೆಗಳನ್ನು ಬರೆಯುತ್ತಾ ಬಂದಿರುವ ಸೌಮ್ಯ ಅವರಿಗೆ ಕವಿತೆ ಬರೆಯುವುದು ಇಷ್ಟದ ಪ್ರಕಾರ. 'ಸಂಜೆ ಐದರ ಸಂತೆ' ಇವರ ಪ್ರಥಮ ಸಂಕಲನವಾಗಿದೆ.

ಸೌಮ್ಯ ಅವರ ಪತಿ ಎಲ್. ದಯಾನಂದ ವಕೀಲರಾಗಿದ್ದಾರೆ. ಪತಿ, ಗೆಳೆಯರು ಮತ್ತು ಸಹೋದ್ಯೋಗಿಗಳ ಸಹಕಾರವನ್ನು ಸ್ಮರಿಸುವ ಸೌಮ್ಯ ಅವರು 'ಮಾಸ್ತಿಯವರ ಸಣ್ಣಕಥೆಗಳಲ್ಲಿ ಸ್ತ್ರೀ ಸಂವೇದನೆ' ವಿಷಯ ಕುರಿತು ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಪಿಎಚ್.ಡಿ ಪದವಿ ಪಡೆಯಲು ಸಿದ್ಧತೆ ನಡೆಸಿದ್ದಾರೆ.

'ಸಂಜೆ ಐದರ ಸಂತೆ' ಕವನ ಸಂಕಲನದ ಕವಿತೆಗಳ ಓದು ಮತ್ತು ವಿಮರ್ಶೆಯು ಕೂಡ ದಾವಣಗೆರೆ ವಿಶ್ವವಿದ್ಯಾನಿಲಯದ ಡಾ. ಎಂ. ಚಿದಾನಂದಮೂರ್ತಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಕನ್ನಡ ವಿಭಾಗದಿಂದ ಇತ್ತೀಚೆಗಷ್ಟೇ ನಡೆಯಿತು. ವಿಭಾಗದ ಅಧ್ಯಕ್ಷರಾದ ಡಾ. ಜಯರಾಮಯ್ಯ ವಿ., ಮಾರ್ಗದರ್ಶಕರಾದ ಡಾ. ಮಲ್ಲಿಕಾರ್ಜುನ ಕೆ., ಡಾ. ಮಹಾಂತೇಶ ಪಾಟೀಲ ಮೊದಲಾದ ಎಲ್ಲಾ ಪ್ರಾಧ್ಯಾಪಕರ ಸಮ್ಮುಖದಲ್ಲಿ ನಡೆದ ಈ ಚರ್ಚೆಯಲ್ಲಿ ಕವಯತ್ರಿಯ ಕವನಗಳು ಹೇಗೆ ಹೊಸ ಕಾಲಕ್ಕೆ ಮುಖಾಮುಖಿಯಾಗಿವೆ ಎಂಬುದರ ಬಗ್ಗೆಯೂ ವಿಶ್ಲೇಷಿಸಲಾಯಿತು.

## ಬರ ನಿರ್ವಹಣೆಗೆ 860 ಕೋಟಿ ರೂ.

(1ನೇ ಪುಟದಿಂದ) ಸಿದ್ದರಾಮಯ್ಯ ಹೇಳಿದ್ದಾರೆ.

ಹರಿಹರ ತಾಲ್ಲೂಕಿನ ರಾಜನಹಳ್ಳಿಗೆ ಮಹರ್ಷಿ ವಾಲ್ಮೀಕಿ ಜಾತ್ರೆಗೆ ಆಗಮಿಸಿದ್ದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನರು ಗುಳೇ ಹೋಗದಂತೆ ತಪ್ಪಿಸಲು ಹಾಗೂ ಅವರ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ ಕ್ರಮಕೈಗೊಳ್ಳಲು ಸ್ಪಷ್ಟ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದರು. ತಾತ್ಕಾಲಿಕ ಪರಿಹಾರವಾಗಿ ಒಬ್ಬ ರೈತನಿಗೆ ತಲಾ 2,000 ದಂತೆ ಸುಮಾರು 34 ಲಕ್ಷ ರೈತರಿಗೆ 650 ಕೋಟಿ ರೂ. ನೀಡಲಾಗಿದೆ ಎಂದು ಹೇಳಿದರು.

ಕಾಂಗ್ರೆಸ್ ಸರ್ಕಾರದಲ್ಲೂ ಶೇ.40ರ ಕಮೀಷನ್ ಇದೆ ಎಂಬ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಆರೋಪದ ಬಗ್ಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಬಿಜೆಪಿ ಸರ್ಕಾರದಲ್ಲಿ ಕೇಳಿ ಬಂದ ಆರೋಪದ ಬಗ್ಗೆ ತನಿಖೆ ನಡೆಸಲು ನಾಗಮೋಹನ್ ದಾಸ್ ನೇತೃತ್ವದ ಸಮಿತಿ ರಚಿಸಿದ್ದೇವೆ. ಆ ಸಮಿತಿಗೆ ಹೋಗಿ ಸಾಕ್ಷಿ ನೀಡಲಿ ಎಂದು ಹೇಳಿದರು.

ಐದು ತಿಂಗಳಾದರೂ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡಿಲ್ಲ. ಬಿಜೆಪಿ ನಾಯಕರು ಕೇವಲ ಭಾಷಣ ಮಾಡುತ್ತಾರೆಯೇ ಹೊರತು, ಕೇಂದ್ರದೊಂದಿಗೆ ಸಂವಹನ ನಡೆಸಿ ಪರಿಹಾರ ದೊರಕಿಸಿ ಕೊಡುತ್ತಿಲ್ಲ ಎಂದು ಸಿದ್ದರಾಮಯ್ಯ ಇದೇ ಸಂದರ್ಭದಲ್ಲಿ ಆಕ್ಷೇಪಿಸಿದರು.

ನವದೆಹಲಿಯಲ್ಲಿ ತೆರಿಗೆ ಹಂಚಿಕೆಯ ಬಗ್ಗೆ ನಡೆಸಿದ ರಾಜ್ಯದ ಪ್ರತಿಭಟನೆಯನ್ನು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರು ಟೀಕಿಸಿದ್ದಾರೆ. ಹಾಗಾದರೆ ರಾಜ್ಯಕ್ಕೆ ಕೇಂದ್ರದಿಂದ ಆದ ಅನ್ಯಾಯ ವಿರೋಧಿಸುವುದು ತಪ್ಪೇ? ಎಂದೂ ಅವರು ಪ್ರಶ್ನಿಸಿದರು.

ಕರ್ನಾಟಕದಿಂದ 100 ರೂ. ತೆರಿಗೆ ಪಾವತಿಸಿದರೆ, ಕೇವಲ 13 ರೂ. ರಾಜ್ಯಕ್ಕೆ ವಾಪಸ್ ಬರುತ್ತಿದೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದಾದರೆ ರಾಜಕೀಯ ಬಿಡುತ್ತೇನೆ ಎಂದು ಸಿದ್ದರಾಮಯ್ಯ ಹೇಳಿದರು. ರಾಜ್ಯದಿಂದ 4,30,000 ಕೋಟಿ ರೂ. ತೆರಿಗೆ ಸಂಗ್ರಹವಾದರೆ, ನಮಗೆ 50,257 ಕೋಟಿ ರೂ.ಮಾತ್ರ ಮರಳಿ ಬರುತ್ತಿದೆ. ಕೇಂದ್ರದ ಈ ಧೋರಣೆಯನ್ನು ವಿರೋಧಿಸಲಾಗುತ್ತಿದೆ ಎಂದು ಹೇಳಿದರು.

## ಹಿರೇಹಳ್ಳಿಯಲ್ಲಿ ಸೂರ್ಯದೇವರ ಜಾತ್ರೆ

ದಾವಣಗೆರೆ, ಫೆ. 9- ಚಳ್ಳಕೆರೆ ತಾಲ್ಲೂಕಿನ ಹಿರೇಹಳ್ಳಿ ಗ್ರಾಮದಲ್ಲಿ ಪ್ರತಿ ವರ್ಷದಂತೆ ಇದೇ ದಿನಾಂಕ 11 ರಿಂದ 14 ರವರೆಗೆ ಸೂರ್ಯ ದೇವರ ಜಾತ್ರೆ ಜರುಗಲಿದೆ.

## ಎಲೆಬೇತೂರು ಗ್ರಾಮದಲ್ಲಿ ದೇವಸ್ಥಾನದ ಉದ್ಘಾಟನೆ, ಪ್ರತಿಷ್ಠಾಪನೆ



ದಾವಣಗೆರೆ, ಫೆ. 9 - ಇಲ್ಲಿಗೆ ಸಮೀಪದ ಎಲೆಬೇತೂರು ಗ್ರಾಮದಲ್ಲಿ ಶ್ರೀ ಮಾರಿಕಾಂಬಾ ದೇವಿ ದೇವಸ್ಥಾನದ ಉದ್ಘಾಟನೆ ಹಾಗೂ ದೇವಿಯ ಪ್ರತಿಷ್ಠಾಪನೆ ಕಾರ್ಯಕ್ರಮವನ್ನುಇದೇ ದಿನಾಂಕ 12 ಮತ್ತು 13ರಂದು ಹಮ್ಮಿಕೊಳ್ಳಲಾಗಿದೆ.

ದಿನಾಂಕ 12 ರ ಸೋಮವಾರ ಬೆಳಿಗ್ಗೆ ಶ್ರೀ ಮಾರಿಕಾಂಬಾ ದೇವಿಯನ್ನು ಮೆರವಣಿಗೆ ಮೂಲಕ ಬಾಜಾ ಭಜಂತ್ರಿಯೊಂದಿಗೆ ದೇವಸ್ಥಾನಕ್ಕೆ ಕರೆತರಲಾಗುವುದು. ಸಂಜೆ 6 ಗಂಟೆಗೆ ದೇವತೆಗೆ ಅದಿವಾಸ ಪೂಜೆ ಹಾಗೂ ವಾಸ್ತು ಮತ್ತು ದೇವತಾ ಪ್ರತಿಷ್ಠಾಂಗ ಹೋಮ ಜರುಗುವುದು. ದಿನಾಂಕ 13ರ ಮಂಗಳವಾರ ಬೆಳಿಗ್ಗೆ ದೇವಸ್ಥಾನ ಉದ್ಘಾಟನೆ, ದೇವಿಯ ಪ್ರತಿಷ್ಠಾಪನೆ ನಂತರ ಮಹಾಮಂಗಳಾರತಿ, ಕಳಸಾರೋಹಣ ಕಾರ್ಯಕ್ರಮ ಜರುಗುವುದು. ನಂತರ ಪ್ರಸಾದ ವಿತರಣೆ ನಡೆಯಲಿದೆ.

## ಪರಿವಾರ, ತಳವಾರರಿಗೆ ಸ್ಥಾನ

### ವಿಶ್ವವಿದ್ಯಾಲಯಕ್ಕೆ ವಾಲ್ಮೀಕಿ ಹೆಸರು, ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ : ಸಿದ್ದರಾಮಯ್ಯ

(1ನೇ ಪುಟದಿಂದ) ಸೇರಿಸಿದೆ. ಆದರೆ, ರಾಜ್ಯದಲ್ಲಿ ಈಗಲೂ 1ನೇ ಪ್ರವರ್ಗದಲ್ಲಿದ್ದಾರೆ. ತಕ್ಷಣವೇ ಸಭೆ ಕರೆದು ಅವರನ್ನು ಎಸ್.ಟಿ.ಗೆ ಸೇರಿಸಲು ಕ್ರಮ ತೆಗೆದುಕೊಳ್ಳ ಲಾಗುವುದು ಎಂದು ಸಿದ್ದರಾಮಯ್ಯ ತಿಳಿಸಿದರು.

ಜಾತಿ ಪ್ರಮಾಣ ಪತ್ರಕ್ಕೆ ಸಂಬಂಧಿಸಿದಂತೆ ನಿಮ್ಮ ವಿರುದ್ಧ ದಾಖಲಾಗಿರುವ ಎಲ್ಲ ಪ್ರಕರಣಗಳನ್ನು ವಾಪಸ್ ಪಡೆಯಲಾಗುವುದು ಎಂದೂ ಸಿದ್ದರಾಮಯ್ಯ ಹೇಳಿದರು.

ರಾಜ್ಯದ ಯಾವುದಾದರೂ ಒಂದು ವಿಶ್ವವಿದ್ಯಾಲಯಕ್ಕೆ ಮಹರ್ಷಿ ವಾಲ್ಮೀಕಿ ಹೆಸರು ಇಡಲಾಗುವುದು ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದರು. ಸಮಾಜ ಕಲ್ಯಾಣ ಸೇರಿದಂತೆ ಎಲ್ಲ ಇಲಾಖೆಗಳಲ್ಲಿ ಪರಿಶಿಷ್ಟರಿಗೆ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಯಾವುದೇ ಕಾರಣಕ್ಕೂ ಹುದ್ದೆಗಳನ್ನು ಖಾಲಿ ಬಿಡದಂತೆ ಕ್ರಮ ತೆಗೆದುಕೊಳ್ಳಲಾಗುವುದು ಎಂದೂ ಸಿದ್ದರಾಮಯ್ಯ ಹೇಳಿದರು.

## ಸೊರಟೂರು ಹಾಲು ಉತ್ಪಾದಕರ ಸಂಘಕ್ಕೆ ಆಯ್ಕೆ



ನ್ಯಾಮತಿ, ಫೆ. 9- ಹೊನ್ನಾಳಿ ತಾಲ್ಲೂಕು ಸೊರಟೂರು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ 12 ಕ್ಷೇತ್ರಗಳಿಗೆ ನಡೆದ ಚುನಾವಣೆಯಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ.

ಹೊನ್ನಾಳಿ ತಾಲ್ಲೂಕಿನ ಸೊರಟೂರು ಗ್ರಾಮದ ಹಾಲು ಉತ್ಪಾದಕರ ಸಂಘದಲ್ಲಿ 249 ಸದಸ್ಯತ್ವ ಹೊಂದಿದ ಮತದಾರರಿದ್ದು, 240 ಸದಸ್ಯರು ಮತ ಚಲಾಯಿಸಿದ್ದಾರೆ. ಸಂಘದ 12 ಕ್ಷೇತ್ರಗಳಿಗೆ 28 ಅಭ್ಯರ್ಥಿಗಳು ಸ್ಪರ್ಧಿಸಿದ್ದರು.

ಪರಿಶಿಷ್ಟ ಜಾತಿಯಲ್ಲಿ ಹೆಚ್.ಬಿ. ಬಸವರಾಜಪ್ಪ, ಪರಿಶಿಷ್ಟ ಪಂಗಡದ ಟಿ. ರವಿ ಎರಡು ಮಹಿಳಾ ಕ್ಷೇತ್ರದಿಂದ ಎಂ. ಅನಿತಾಬಾಯಿ, ಹೆಚ್. ಸುಮಂಗಳ, ಹಿಂದುಳಿದ ಆ ವರ್ಗದ ಶಾಂತವೀರಪ್ಪ, ಹಿಂದುಳಿದ ಬ ವರ್ಗದ ಸಂತೋಷ್ ಮಾಳಗಿ ಆಯ್ಕೆಯಾಗಿದ್ದಾರೆ.

ಸಾಮಾನ್ಯ ಕ್ಷೇತ್ರದಿಂದ ಎ. ಶಿವಮೂರ್ತಿ, ಡಿ. ಆನಂದಪ್ಪ, ಹೆಚ್.ಪಾಲಾಕ್ಷಪ್ಪ, ಟಿ. ತಿಮ್ಮಪ್ಪ, ಗಿರಿಜಮ್ಮ, ಆರ್. ಶೇಖರಪ್ಪ ಆಯ್ಕೆಗೊಂಡಿದ್ದಾರೆಂದು ಚುನಾವಣಾಧಿಕಾರಿ ಕೆ.ಎನ್. ನವೀನ್ ಕುಮಾರ್ ತಿಳಿಸಿದ್ದಾರೆ. ಸೊರಟೂರು ಗ್ರಾ.ಪಂ. ಅಧ್ಯಕ್ಷ ಜಿ. ಬಸವನಗೌಡ ಪಾಟೀಲ್, ಸೊರಟೂರು ಹಾಲು ಉತ್ಪಾದಕರ ಸಂಘದ ಕಾರ್ಯದರ್ಶಿ ಎಂ. ಬಸವನಗೌಡ, ಗ್ರಾಮದ ಮುಖಂಡರಾದ ಜಿ. ಬಸವನಗೌಡ, ನಿವೃತ್ತ ಶಿಕ್ಷಕ ಚಂದ್ರಪ್ಪ, ಹನುಮಂತಪ್ಪ, ಶ್ರೀನಿವಾಸ್ ಜೀನಹಳ್ಳಿ ಮತ್ತಿತರರಿದ್ದರು.


ದಾವಣಗೆರೆ ಅರ್ಬನ್ ಬ್ಯಾಂಕ್ ಲಿ., ದಾವಣಗೆರೆ



ತಮ್ಮ ಸೇವಾಕಾಂಕ್ಷಿ
ಜಂಬಗಿ ರಾದೇಶ್
ಜಿಎಸ್‌ಟಿ ಮತ್ತು ಆದಾಯ ತೆರಿಗೆ ಸಲಹೆಗಾರರು
ಮೊ : 94482 16089

ಮಾನ್ಯ ಷೇರುದಾರ ಸದಸ್ಯರಲ್ಲಿ ಮನವಿ



ದಿನಾಂಕ 11/02/2024 ರ ಭಾನುವಾರದಂದು ಬ್ಯಾಂಕಿನ ನಿರ್ದೇಶಕರ ಸ್ಥಾನಕ್ಕೆ ಪ್ರವರ್ಗ ಬಿ-ವರ್ಗದಿಂದ ನಮ್ಮ ಆತ್ಮೀಯ ಮಿತ್ರರಾದ **ಶ್ರೀ ಜಂಬಗಿ ರಾಧೇಶ್**ರವರು ಸ್ಪರ್ಧಿಸಿರುತ್ತಾರೆ.

**ಶ್ರೀ ಜಂಬಗಿ ರಾಧೇಶ್**ರವರು ದಾವಣಗೆರೆ ಜಿಲ್ಲೆ ಹಿರಿಯ ಮುತ್ಸದ್ದಿ, ಮಾಜಿ ನಗರಸಭಾ ಅಧ್ಯಕ್ಷರು, ಮಾಜಿ ಬ್ಯಾಂಕಿನ ಅಧ್ಯಕ್ಷರಾಗಿ ದಾವಣಗೆರೆ ಮತ್ತು ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದಂತಹ ದಿ|| ಶ್ರೀ ಜಂಬಗಿ ಶರಣಪ್ಪನವರ ಪುತ್ರರು ತಂದೆಯವರಂತೆ ಧ್ಯೇಯವನ್ನು ಇಟ್ಟುಕೊಂಡು ಸಮಾಜದಲ್ಲಿ ಬೆಳೆಯುತ್ತಾ 'ಬೆಳೆಯುವ ಚಿಗುರು ಮೊಳಕೆಯಲ್ಲಿ' ಅನ್ನುವ ಹಾಗೆ ವಿದ್ಯಾರ್ಥಿ ಜೀವನದಿಂದಲೇ ನಾಯಕತ್ವ ಗುಣ ಹೊಂದಿದ **ಶ್ರೀ ಜಂಬಗಿ ರಾಧೇಶ್**ರವರು ಹತ್ತು ಹಲವಾರು ಸಂಘ ಸಂಸ್ಥೆಗಳಿಗೆ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ.

- ದಾವಣಗೆರೆ ಜಿಲ್ಲಾ ತೆರಿಗೆ ಸಲಹೆಗಾರರ ಸಂಘದ ಅಧ್ಯಕ್ಷರಾಗಿ ಸುಮಾರು 7 ವರ್ಷದಿಂದ ದಾವಣಗೆರೆ ಜಿಲ್ಲೆಯ ವ್ಯಾಪಾರಸ್ತರಿಗೆ ಕೈಗಾರಿಕೋದ್ಯಮಿಗಳಿಗೆ ಮತ್ತು ತೆರಿಗೆ ಸಲಹೆಗಾರರಿಗೆ ಜಿ.ಎಸ್.ಟಿ ಮತ್ತು ಆದಾಯ ತೆರಿಗೆಗಳ ಬಗ್ಗೆ ಅರಿವು ಮೂಡಿಸುತ್ತಾ ಬಂದಿರುತ್ತಾರೆ.
- ದಾವಣಗೆರೆ ಛೇಂಬರ್ ಆಫ್ ಕಾಮರ್ಸ್‌ನ ನಿರ್ದೇಶಕರಾಗಿ ಸುಮಾರು 10ವರ್ಷಗಳಿಂದ ಸೇವೆ ಸಲ್ಲಿಸುತ್ತಾ ವ್ಯಾಪಾರಸ್ತರಿಗೆ ತೆರಿಗೆಗಳ ಬಗ್ಗೆ ಸಮಸ್ಯೆಗಳು ಬಂದಲ್ಲಿ ರಾಜ್ಯ FKCCI Bangalore ನ ಪದಾದಿಕಾರಿಗಳ ಜೊತೆ ವಿಚಾರ ವಿನಿಮಯ ಮಾಡಿ ರಾಜ್ಯ ಸರ್ಕಾರಕ್ಕೆ ಮತ್ತು ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ.
- FKCCI Bangaloreನ ವಿಶೇಷ ಆಹ್ವಾನಿತರಾಗಿ ಮೂರು ವರ್ಷಗಳಿಂದ ಜಿಲ್ಲೆಯನ್ನು ಪ್ರತಿನಿಧಿಸುತ್ತಿದ್ದಾರೆ.
- ಮಾಜಿ ರೋಟರಿ ಕ್ಲಬ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.
- ಹಾಲಿ ದಾವಣಗೆರೆ ಲಯನ್ಸ್ ಕ್ಲಬ್‌ನ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.
- ಜಯದೇವ ಹಾಸ್ಟೆಲ್‌ನ ಮಾಜಿ ಖಜಾಂಚಿ ಮತ್ತು ಹಾಲಿ ನಿರ್ದೇಶಕರಾಗಿರುತ್ತಾರೆ.

ಹೀಗೆ ಇನ್ನೂ ಹಲವಾರು ಸಂಘ ಸಂಸ್ಥೆಗಳ ಮೂಲಕ ಸಮಾಜ ಸೇವೆ ಸಲ್ಲಿಸುತ್ತಿರುವ **ಶ್ರೀ ಜಂಬಗಿ ರಾಧೇಶ್**ರವರು ಈ ಹಿಂದೆ ಇದೇ ಅರ್ಬನ್ ಕೊ-ಆಪ್ ಬ್ಯಾಂಕಿನ ಚುನಾವಣೆಯಲ್ಲಿ ಅಲ್ಪ ಮತಗಳಿಂದ ಪರಾಭವಗೊಂಡಿದ್ದುರು. ಇವುಗಳನ್ನೆಲ್ಲಾ ಮನಗಂಡು ಮಾನ್ಯ ಷೇರುದಾರ ಸದಸ್ಯರು ಈ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಪಡಿಸಲು ಉತ್ಸುಕರಾಗಿದ್ದಾರೆ, ಆದ್ದರಿಂದ ಇಂಥ ನಿಸ್ವಾರ್ಥ ಸೇವಾ ಮನೋಭಾವ ಇರುವ **ಶ್ರೀ ಜಂಬಗಿ ರಾಧೇಶ್**ರವರಿಗೆ ತಮ್ಮೆಲ್ಲರ ಅತ್ಯಮೂಲ್ಯವಾದ ಮತವನ್ನು ಕೊಟ್ಟು ಪ್ರಚಂಡ ಬಹುಮತದಿಂದ ಗೆಲ್ಲಿಸೋಣ.

10 ಜಂಬಗಿ ರಾದೇಶ
ಪ್ರವರ್ಗ ಬಿ. ಮೀಸಲು

ದಯವಿಟ್ಟು ಸೀರಿಯಲ್ ನಂಬರ್ 10 ಕ್ಕೆ ಒಂದು ಮತ ಕೊಟ್ಟು ಜಯಶೀಲರನ್ನಾಗಿ ಮಾಡಿ.

ದಿನಾಂಕ 11.02.2024 ನೇ ಭಾನುವಾರ,
ಸಮಯ : ಬೆಳಿಗ್ಗೆ 9 ರಿಂದ ಸಂಜೆ 4 ರವರೆಗೆ,
ಸ್ಥಳ : ಮೋತಿ ವೀರಪ್ಪ ಕಾಲೇಜು ಆವರಣ, ದಾವಣಗೆರೆ.

ಈ ಬಾರಿ ಯುವ ಪ್ರತಿಭೆ ಹಾಗೂ ಸಮಾಜ ಸೇವಕರಾದ ಜಂಬಗಿ ರಾಧೇಶ್‌ಗೆ ಮತ ಹಾಕೋಣ

ಶುಭ ಕೋರುವವರು
ದಾವಣಗೆರೆ ಜಿಲ್ಲಾ ತೆರಿಗೆ ಸಲಹೆಗಾರರ ಸಂಘದ ಆತ್ಮೀಯ ಗೆಳೆಯರು
ಸನ್ನದು ಲೆಕ್ಕ ಪರಿಶೋಧಕರ (CA) ಸಂಘದ ಆತ್ಮೀಯ ಗೆಳೆಯರು
ರೋಟರಿ ಕ್ಲಬ್‌ನ ಹಿರಿಯ ಸದಸ್ಯರು ಮತ್ತು ಗೆಳೆಯರು
ದಾವಣಗೆರೆ ಲಯನ್ಸ್ ಕ್ಲಬ್ ನ ಆತ್ಮೀಯ ಗೆಳೆಯರು
ವಾಯುವಿಹಾರ ಬಳಗದ ಆತ್ಮೀಯ ಗೆಳೆಯರು
ಹ್ಯಾಪಿ ಫ್ರೆಂಡ್ಸ್ ಕ್ಲಬ್‌ನ ಹಿರಿಯ ಮತ್ತು ಕಿರಿಯ ಗೆಳೆಯರು.
ಸ್ನೇಹಿತರು , ಬಂಧುಗಳು ಮತ್ತು ಹಿತೈಷಿಗಳು

# ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

## ಆಡಳಿತ ಮಂಡಳಿ ಚುನಾವಣೆ-2024



ಮಾನ್ಯ ಗೌರವಾನ್ವಿತ ಷೇರುದಾರರೇ, ಗುರು-ಹಿರಿಯರೇ, ಆತ್ಮೀಯ ಸ್ನೇಹಿತರೇ ಹಾಗೂ ಬಂಧು-ಮಿತ್ರರೇ,

ದಿನಾಂಕ 11.02.2024ರ ಭಾನುವಾರ ನಡೆಯಲಿರುವ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಗೆ ಮತ್ತಿಹಳ್ಳಿ ಸಂತೋಷ್ ಆದ ನಾನು ನಾಮಪತ್ರ ಸಲ್ಲಿಸಿದ್ದೆ. ಆದರೆ, ಹಿರಿಯರ ಮಾತಿಗೆ ಮನ್ನಣೆ ನೀಡಿ ನಾನು ನಾಮಪತ್ರವನ್ನು ಹಿಂಪಡೆದಿದ್ದೇನೆ. ಇಲ್ಲಿಯವರೆಗೂ ನನಗೆ ಸಹಕರಿಸಿದ ಬ್ಯಾಂಕಿನ ಸದಸ್ಯರಿಗೂ, ಮಿತ್ರರಿಗೂ, ಎಲ್ಲಾ ಷೇರುದಾರರಿಗೂ, ಬಂಧುಗಳಿಗೂ, ಹಿತೈಷಿಗಳಿಗೆ ತುಂಬು ಹೃದಯದ ಕೃತಜ್ಞತೆಗಳು. ತಮ್ಮ ಅಗಾಧವಾದ ಪ್ರೀತಿಗೆ ನಾನು ಸದಾ ಕಾಲ ಚಿರಋಣಿಯಾಗಿರುತ್ತೇನೆ. ಇದೇ ರೀತಿ ತಮ್ಮ ಪ್ರೀತಿ, ವಿಶ್ವಾಸ, ನಿಮ್ಮ ಆಶೀರ್ವಾದ ನನ್ನ ಜೊತೆ ಜೊತೆಯಲ್ಲೇ ಇರಲಿ ಎಂದು ಆಶಿಸುತ್ತಾ ಮತ್ತೊಮ್ಮೆ ನಿಮಗೆ ಹೃತ್ಪೂರ್ವಕವಾದ ಧನ್ಯವಾದಗಳನ್ನು ತಿಳಿಸುತ್ತೇನೆ.

ಈ ಚುನಾವಣೆಯಲ್ಲಿ ಶ್ರೀ ಬಿ.ಸಿ. ಉಮಾಪತಿ ಮತ್ತು ಶ್ರೀ ಕೋಗುಂಡಿ ಬಕ್ಕೇಶಪ್ಪ ಅವರುಗಳ ನೇತೃತ್ವದ ಗುಂಪಿನ ಎಲ್ಲಾ 10 ಜನರಿಗೆ ತಾವು ಮತದಾನ ಮಾಡುವುದರ ಮೂಲಕ ಆ ಗುಂಪಿನ ಎಲ್ಲರನ್ನೂ ಜಯಶೀಲರನ್ನಾಗಿ ಮಾಡುವಂತೆ ವಿನಂತಿಸುತ್ತೇನೆ.

**ಮತ್ತಿಹಳ್ಳಿ ವಿ. ಸಂತೋಷ್‌ಕುಮಾರ್**
(ದಿ. ಮತ್ತಿಹಳ್ಳಿ ವೀರಣ್ಣನವರ ಪುತ್ರ) ಕೈಗಾರಿಕೋದ್ಯಮಿಗಳು

# ವಿದೇಶಿ ಪ್ರವಾಸದ ಶುಭ ಹಾರೈಕೆಗಳು



ಎಲ್ಲರ ಹಿತೈಷಿಯಾಗಿ, ಸಹೃದಯಿಯಾಗಿ ಸತತ
ಪರಿಶ್ರಮದಿಂದ ಸಾಧನೆ ಹಾದಿಯಲ್ಲಿ ಕಡು ಬಡತನದ
ಕಡಲ ಹಾರಿ ಅಮೇರಿಕಾದಲ್ಲಿರುವ
ಮಗ, ಸೊಸೆ, ಮೊಮ್ಮಕ್ಕಳನ್ನು ನೋಡಲು ವಿದೇಶ
ಪ್ರವಾಸಕ್ಕೆ ತೆರಳುತ್ತಿರುವ ಮಾಗಾನಹಳ್ಳಿಯ
ನಮ್ಮ ಬಂಧು

**ಶ್ರೀ ಹನುಮಂತಪ್ಪ ಸುಣಗಾರ**

ಇವರಿಗೆ ಶುಭ ಹಾರೈಕೆಗಳು.

**ಶುಭ ಕೋರುವವರು**

- ಶ್ರೀ ಚಿಗಟೇರಿ ಬಾರಿಕಾರ ಮಂಜುನಾಥ ವಕೀಲರು,
- ರಾಜಾರಾಮ್, ಶೃತಿ, ಶ್ರೀದೇವಿ ಕಣಿವಿಹಳ್ಳಿ
- ಶ್ರೀ ನೀಲಕಂಠಗೌಡ್ರು
  ಹನುಮಂತ, ಗಣೇಶ್, ಪವನ್
  ಕಣಿವಿಹಳ್ಳಿ, ಹರಪನಹಳ್ಳಿ ತಾ.
- ಶ್ರೀಮತಿ ರತ್ನಮ್ಮ ಗೋಣಿಸ್ವಾಮಿ
  ಚಿರಂಜೀವಿ, ಯಶಸ್ವಿನಿ, ದಾವಣಗೆರೆ
- ಶ್ರೀಮತಿ ಅಂಬಿಕಾ, ಶ್ರೀ ಪರಶುರಾಮ ಸುಣಗಾರ
  ಶಶಾಂಕ್, ಹಂಶಿಕಾ

ಮಾಗಾನಹಳ್ಳಿ ಕೋಡಿ ಕ್ಯಾಂಪ್, ದಾವಣಗೆರೆ.

# ಅಭಿನಂದನೆಗಳು






**ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ**
ನಮ್ಮ ಸಂಘದ ಕಾರ್ಯದರ್ಶಿಗಳೂ, ಹಿರಿಯ ಕೈಗಾರಿಕೋದ್ಯಮಿಗಳೂ,
ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್
ಬ್ಯಾಂಕಿನ ಅಧ್ಯಕ್ಷರೂ ಆಗಿರುವ

**ಶ್ರೀ ಕೋಗುಂಡಿ ಬಕ್ಕೇಶಪ್ಪ**

ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

ಸಂಘಕ್ಕೆ ಕಳೆದ 42 ವರ್ಷಗಳಿಂದ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಯಾವುದೇ ಕಪ್ಪು ಚುಕ್ಕೆ ಇಲ್ಲದೆ ಆಡಳಿತ ನಿರ್ವಹಿಸಿದ್ದೀರಿ, ಸಂಘಕ್ಕೆ ಸ್ವಂತ ಕಟ್ಟಡ ಹೊಂದಲು ಶ್ರಮಿಸಿದ್ದೀರಿ. 42 ವರ್ಷಗಳಿಂದ ಅಕ್ಕಿ ಗಿರಣಿದಾರರ ಮತ್ತು ಗಿರಣಿಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಜೊತೆಗೆ ಉತ್ತಮ ಸಂಬಂಧವಿರಿಸಿ ಮತ್ತು ಆಹಾರ ಇಲಾಖೆ ಹಾಗೂ ಇತರೆ ಸರ್ಕಾರಿ ಇಲಾಖೆಯವರ ಜೊತೆ ಸಹಕರಿಸಿ, ಗಿರಣಿಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗಲು ಶ್ರಮವಹಿಸಿದ್ದೀರಿ.

ರಾಜ್ಯಮಟ್ಟದಲ್ಲಿ ಅಕ್ಕಿಗಿರಣಿಗಳ ಸಂಘಕ್ಕೆ ಬೆಂಗಳೂರಿನ ಯಶವಂತಪುರ ಮಾರುಕಟ್ಟೆ ಪ್ರಾಂಗಣದಲ್ಲಿ ಸುಸಜ್ಜಿತ ಕಟ್ಟಡವನ್ನು ಅಂದಿನ ಮಾರುಕಟ್ಟೆ ಸಚಿವರಾದ ಸನ್ಮಾನ್ಯ ಶ್ರೀ ಶಾಮನೂರು ಶಿವಶಂಕರಪ್ಪನವರು ಮತ್ತು ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಸಹಾಯದಿಂದ ಮಂಜೂರು ಮಾಡಿಸಿಕೊಂಡು ರಾಜ್ಯ ಅಕ್ಕಿಗಿರಣಿದಾರರ ಪ್ರೀತಿಗೆ ಪಾತ್ರರಾಗಿದ್ದೀರಿ ಮತ್ತು ರಾಜ್ಯ ಸಂಘದ ಖಜಾಂಚಿಯಾಗಿ ಭದ್ರಬುನಾದಿ ಹಾಕಿದ್ದೀರಿ.

ಕಳೆದ 32 ವರ್ಷಗಳಿಂದ ದಿ ದಾವಣಗೆರೆ ಅರ್ಬನ್ ಬ್ಯಾಂಕ್ ನಿರ್ದೇಶಕರಾಗಿ, ಉಪಾಧ್ಯಕ್ಷರಾಗಿ ಮತ್ತು ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿರುತ್ತೀರಿ. ಈ ಸಂದರ್ಭದಲ್ಲಿ ಹಲವಾರು ಅಕ್ಕಿಗಿರಣಿಗಳಿಗೆ ಆರ್ಥಿಕ ಸಹಾಯವನ್ನು ಬ್ಯಾಂಕಿನಿಂದ ಮಂಜೂರು ಮಾಡಿಸಿ ಯಶಸ್ವಿಯಾಗಿ ಗಿರಣಿ ನಡೆಸಲು ಅವಕಾಶ ಕಲ್ಪಿಸಿದ್ದೀರಿ. ಕಳೆದ 10 ವರ್ಷಗಳಿಂದ ರಾಜ್ಯ ಪಟ್ಟಣ ಸಹಕಾರಿ ಬ್ಯಾಂಕುಗಳ ಒಕ್ಕೂಟಕ್ಕೆ ನಿರ್ದೇಶಕರಾಗಿ ಕೆಲಸ ನಿರ್ವಹಿಸುತ್ತಿದ್ದೀರಿ.

ಜಿಲ್ಲಾ ಜನಪ್ರಿಯ ಸಚಿವರಾದ **ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್** ಮತ್ತು ಹಿರಿಯ ಶಾಸಕರೂ ಮತ್ತು ಸಂಘದ ಗೌರವ ಅಧ್ಯಕ್ಷರೂ ಆದ **ಶ್ರೀ ಶಾಮನೂರು ಶಿವಶಂಕರಪ್ಪನವರ** ಬೆಂಬಲದಿಂದ ಈಗ ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿಗೆ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದೀರಿ. ಮುಂದೆ ಯಶಸ್ವಿಯಾಗಿ ಕಾರ್ಯನಿರ್ವಹಿಸುವುದರಲ್ಲಿ ಸಂಶಯವೇ ಇಲ್ಲ ಅನ್ನುವ ಅಭಿಲಾಷಿಯಿಂದ ಸಂಘದಿಂದ ಹೃದಯಪೂರ್ವಕವಾಗಿ ಅಭಿನಂದಿಸುತ್ತೇವೆ.

**ದಿ ದಾವಣಗೆರೆ ಜಿಲ್ಲಾ ಅಕ್ಕಿ ಗಿರಣಿದಾರರ ಸಂಘ**
**ದಾವಣಗೆರೆ.**


# ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,



## 2024-2029ನೇ ಅವಧಿಗೆ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ

### ಬ್ಯಾಂಕಿನ ಷೇರುದಾರರಲ್ಲಿ ಮನವಿ

**ದಿನಾಂಕ 11-02-2024ರ ಭಾನುವಾರ ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜು,** ಡಾ. ಎಂ.ಸಿ. ಮೋದಿ ವೃತ್ತದ ಬಳಿ, ದಾವಣಗೆರೆ ಇಲ್ಲಿ ನಡೆಯಲಿದ್ದು, **ಶ್ರೀ ಬಿ.ಸಿ. ಉಮಾಪತಿ** ಮತ್ತು **ಶ್ರೀ ಕೋಗುಂಡಿ ಬಕ್ಕೇಶಪ್ಪ** ಅವರುಗಳ ನೇತೃತ್ವದಲ್ಲಿ ನಾವುಗಳು ಬ್ಯಾಂಕಿನ ಆಡಳಿತ ಮಂಡಲಿ ಚುನಾವಣೆಗೆ ಸ್ಪರ್ಧಿಸಿದ್ದೇವೆ. ನಮಗೆ ತಮ್ಮ ಅತ್ಯಮೂಲ್ಯವಾದ ಮತವನ್ನು ನೀಡುವುದರ ಮೂಲಕ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಮತ್ತು ತಮ್ಮಗಳ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

### ಬ್ಯಾಲೆಟ್ ನಮೂನೆ

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಭಾವಚಿತ್ರ | ಅಭ್ಯರ್ಥಿಗಳ ಚಿಹ್ನೆ | |
|---|---|---|---|---|
| 2 | **ಅಜ್ಜಂಪುರಶೆಟ್ರು ವಿಜಯಕುಮಾರ್**<br>ಹಾಲಿ ನಿರ್ದೇಶಕರು |  |  | |
| 3 | **ಉಮಾಪತಿ ಬಿ.ಸಿ.**<br>ಹಾಲಿ ನಿರ್ದೇಶಕರು |  |  | |
| 4 | **ಅಂದನೂರು ಮುಪ್ಪಣ್ಣ**<br>ಹಾಲಿ ಉಪಾಧ್ಯಕ್ಷರು |  |  | |
| 5 | **ಕೋಗುಂಡಿ ಬಕ್ಕೇಶಪ್ಪ**<br>ಹಾಲಿ ಅಧ್ಯಕ್ಷರು |  |  | |
| 6 | **ಕಂಚಿಕೇರಿ ಮಹೇಶ್**<br>ಹಾಲಿ ನಿರ್ದೇಶಕರು<br>(ದಿ॥ ಕಂಚಿಕೇರಿ ಕೊಟ್ರಬಸಪ್ಪನವರ ಮಗ) |  |  | |

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಭಾವಚಿತ್ರ | ಅಭ್ಯರ್ಥಿಗಳ ಚಿಹ್ನೆ | |
|---|---|---|---|---|
| 9 | **ಜಯರುದ್ರೇಶ್ ಟಿ.ಎಸ್.**<br>ಹಾಲಿ ನಿರ್ದೇಶಕರು ನಂದಿ ಪೆಟ್ರೋಲ್ ಬಂಕ್<br>(ದಿ॥ ಟಿ.ಜಿ. ಷಡಾಕ್ಷರಪ್ಪನವರ ಮಗ) |  |  | |
| 11 | **ದೇವರಮನಿ ಶಿವಕುಮಾರ್**<br>ಹಾಲಿ ನಿರ್ದೇಶಕರು |  |  | |
| 12 | **ಪಲ್ಲಾಗಟ್ಟೆ ಶಿವಾನಂದಪ್ಪ**<br>ಹಾಲಿ ನಿರ್ದೇಶಕರು |  |  | |
| 15 | **ರುದ್ರಮುನಿಸ್ವಾಮಿ ಹೆಚ್.ಎಂ.**<br>ದೇವನಗರಿ ಗ್ಯಾಸ್ ಏಜೆನ್ಸಿ ಮಾಲೀಕರು<br>(ಲಿಂ॥ ವೇ॥ ಶ್ರೀ ಹೆಚ್.ಎಂ. ಸೋಮನಾಥಯ್ಯನವರ ಮಗ) |  |  | |
| 17 | **ಸೋಗಿ ಮುರುಗೇಶ್**<br>ಹಿಂದುಳಿದ ವರ್ಗ 'ಪ್ರವರ್ಗ-ಬಿ' ಮೀಸಲು |  |  | |

ಸ್ಥಳ: ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜು,
ಡಾ. ಎಂ.ಸಿ. ಮೋದಿ ವೃತ್ತದ ಬಳಿ, ದಾವಣಗೆರೆ
ದಿನಾಂಕ : 11-02-2024, ಭಾನುವಾರ
ಸಮಯ : ಬೆಳಿಗ್ಗೆ 9 ರಿಂದ ಸಂಜೆ 4 ರವರೆಗೆ

**ಪ್ರತಿಯೊಬ್ಬ ಮತದಾರರನಿಗೆ ಹತ್ತು ಮತಗಳನ್ನು ಚಲಾಯಿಸುವ ಹಕ್ಕು ಇದ್ದು, ನಮ್ಮ ಗುಂಪಿನ ಎಲ್ಲಾ ಹತ್ತು ಜನರಿಗೂ ತಮ್ಮ ಅಮೂಲ್ಯವದ ಮತವನ್ನು ನೀಡುವುದರ ಮೂಲಕ ನಿಮ್ಮ ಸೇವೆ ಮಾಡಿಕೊಡಲು ಅವಕಾಶ ಮಾಡಿಕೊಡಬೇಕಾಗಿ ವಿನಂತಿ.**

ತಮ್ಮ ಸೇವಾಕಾಂಕ್ಷಿಗಳು,
❖ ಅಜ್ಜಂಪುರಶೆಟ್ರು ವಿಜಯಕುಮಾರ್ ❖ ಉಮಾಪತಿ ಬಿ. ಸಿ. ❖ ಅಂದನೂರು ಮುಪ್ಪಣ್ಣ
❖ ಕೋಗುಂಡಿ ಬಕ್ಕೇಶಪ್ಪ ❖ ಕಂಚಿಕೇರಿ ಮಹೇಶ್ ❖ ಜಯರುದ್ರೇಶ್ ಟಿ. ಎಸ್.
❖ ದೇವರಮನಿ ಶಿವಕುಮಾರ್ ❖ ಪಲ್ಲಾಗಟ್ಟೆ ಶಿವಾನಂದಪ್ಪ
❖ ರುದ್ರಮುನಿಸ್ವಾಮಿ ಹೆಚ್.ಎಂ. ❖ ಸೋಗಿ ಮುರುಗೇಶ್

# ವಿದ್ಯಾರ್ಥಿಗಳು ಆಸಕ್ತಿ, ಸಮಯ, ಶಕ್ತಿ ಈ ಮೂರನ್ನೂ ಅಧ್ಯಯನಕ್ಕಾಗಿಯೇ ಮೀಸಲಿಟ್ಟಾಗ ಯಶಸ್ಸು

### ಸಂಕಲ್ಪ ಸೇವಾ ಫೌಂಡೇಶನ್ ಕಾರ್ಯಕ್ರಮದಲ್ಲಿ ಮತ್ತು ತರಬೇತುದಾರ ಜಗನ್ನಾಥ ನಾಡಿಗೇರ್ ಪ್ರತಿಪಾದನೆ



ದಾವಣಗೆರೆ, ಫೆ. 9- ಪರೀಕ್ಷೆಗಳು ನಮ್ಮನ್ನು ಮುಂದಿನ ಹಂತಕ್ಕೆ ಕರೆದುಕೊಂಡು ಹೋಗುವುದಕ್ಕಾಗಿಯೇ ಇರುತ್ತವೆ. ಆದರೆ, ಹಾಗೆ ಹೋಗುವುದಕ್ಕೆ ನಾವು ಸೂಕ್ತವಾಗಿ ಸಿದ್ಧವಾಗಿರಬೇಕು ಮತ್ತು ಅದಕ್ಕೆ ಬೇಕಾದ ಕೌಶಲ್ಯಗಳನ್ನು ಹೊಂದಿರಬೇಕು ಎಂದು ಶೈಕ್ಷಣಿಕ ಸಲಹೆಗಾರ ಮತ್ತು ತರಬೇತುದಾರರಾದ ಜಗನ್ನಾಥ ನಾಡಿಗೇರ್ ತಿಳಿಸಿದರು.

ನಗರದ ಸಂಕಲ್ಪ ಸೇವಾ ಫೌಂಡೇಶನ್ ಸಮೀಪದ ಕಕ್ಕರಗೊಳ್ಳ ಗ್ರಾಮದಲ್ಲಿ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ 'ಪರೀಕ್ಷಾ ಸಿದ್ಧತಾ ಕಾರ್ಯಾಗಾರ'ದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಅವರು ಮಾತನಾಡಿದರು.

ಯಾವುದೇ ಪರೀಕ್ಷೆಯಲ್ಲಿ ಯಶಸ್ಸು ಗಳಿಸಬೇಕಾದರೆ ಸ್ಪಷ್ಟವಾದ ಉದ್ದೇಶ, ನಿಖರವಾದ ಆದ್ಯತೆ ಮತ್ತು ಸಮರ್ಪಕವಾದ ಕಾರ್ಯವಿಧಾನ ಈ ಮೂರೂ ನಮ್ಮಲ್ಲಿರಬೇಕು. ನಮ್ಮ ದೇಹ, ಮನಸ್ಸು, ಬುದ್ದಿ ಮತ್ತು ಭಾವನೆಗಳನ್ನು ಪರೀಕ್ಷೆಯ ಯಶಸ್ಸಿಗಾಗಿ ಸಿದ್ಧಗೊಳಿಸ ಬೇಕು. ವಿದ್ಯಾರ್ಥಿಗಳು ತಮ್ಮ ಆಸಕ್ತಿ, ಸಮಯ ಮತ್ತು ಶಕ್ತಿ ಈ ಮೂರನ್ನೂ ಅಧ್ಯಯನಕ್ಕಾಗಿಯೇ ಮೀಸಲಿಟ್ಟಾಗ ಯಶಸ್ಸು ಸಹಜವಾಗಿ ದೊರೆಯುತ್ತದೆ ಎಂದು ತಿಳಿಸಿದರು.

ಸಾಧನೆ ಮತ್ತು ಪ್ರತಿಭೆ ಯಾರ ಸ್ವತ್ತೂ ಅಲ್ಲ. ಎಲ್ಲಾ ಸಮಸ್ಯೆಗಳ ಮಧ್ಯದಲ್ಲೂ ಉತ್ತಮ ಸಾಧನೆ ಮಾಡಬಹುದು. ಹಾಗೆ ಸಾಧನೆ ಮಾಡಿದ ವಿದ್ಯಾರ್ಥಿಗಳ ಜೊತೆಗೆ ಇಡೀ ಸಮಾಜವೇ ನಿಲ್ಲುತ್ತದೆ. ಅದೇ ರೀತಿ ಸಂಕಲ್ಪ ಸೇವಾ ಫೌಂಡೇಶನ್ ಪ್ರತಿಭಾವಂತ ಮಕ್ಕಳ ಪ್ರೋತ್ಸಾಹಕ್ಕೆ ಸದಾ ಸಿದ್ಧವಾಗಿದೆ ಎಂದು ಈ ಫೌಂಡೇಶನ್‌ನ ಅಧ್ಯಕ್ಷ ಜಿ. ಮಹಾಂತೇಶ್ ಹೇಳಿದರು.

ಈ ಬಾರಿಯ ಎಸ್.ಎಸ್.ಎಲ್.ಸಿ ಪಬ್ಲಿಕ್ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಗಳಿಸಿದ ಕಕ್ಕರಗೊಳ್ಳ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗೆ ಸಂಕಲ್ಪ ಸೇವಾ ಫೌಂಡೇಶನ್‌ನಿಂದ ಒಂದು ವರ್ಷಗಳ ಕಾಲ ಉಚಿತವಾಗಿ ಕಂಪ್ಯೂಟರ್ ಶಿಕ್ಷಣ ನೀಡುವುದಾಗಿ ಅವರು ಘೋಷಿಸಿದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಇತರೆ ಮೂರು ಶಾಲೆಗಳಲ್ಲಿ ಅತ್ಯುತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಶೇಕಡ. 50ರಷ್ಟು ವಿನಾಯಿತಿಯಲ್ಲಿ ಕಂಪ್ಯೂಟರ್ ಶಿಕ್ಷಣ ನೀಡುವುದಾಗಿ ಮಹಾಂತೇಶ್ ತಿಳಿಸಿದರು.

ಫೌಂಡೇಶನ್ ವತಿಯಿಂದ ಅಂಗನವಾಡಿಯ 15 ಪುಟ್ಟ ಮಕ್ಕಳಿಗೆ ನೂತನ ಬಟ್ಟೆಯನ್ನು ವಿತರಿಸಲಾಯಿತು. 9 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಪ್ರತಿಭಾವಂತ ವಿದ್ಯಾರ್ಥಿನಿಯ ಮುಂದಿನ ವರ್ಷದ ಸಮವಸ್ತ್ರ, ಪುಸ್ತಕ ಹೀಗೆ ಸಂಪೂರ್ಣ ವೆಚ್ಚವನ್ನು ಫೌಂಡೇಶನ್ ವತಿಯಿಂದ ನಿರ್ವಹಿಸುವುದಾಗಿ ಅವರು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಕ್ಕರಗೊಳ್ಳ ಸರ್ಕಾರಿ ಪ್ರೌಢಶಾಲೆಯ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಕೆ.ಜಿ.ಬಸವನಗೌಡರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ದಾವಣಗೆರೆ ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಶೇರ್ ಅಲಿ ಕಕ್ಕರಗೊಳ್ಳದ ಶಾನುಭೋಗರಾದ ಕುಲಕರ್ಣಿ, ರಾಷ್ಟ್ರಪ್ರಶಸ್ತಿ ವಿಜೇತ ನಿವೃತ್ತ ಮುಖ್ಯೋಪಾಧ್ಯಾಯ ಮಲ್ಲಿಕಾರ್ಜುನಪ್ಪ, ಯೋಗ ಗುರು ಕೊಂಡಜ್ಜಿ ಉಮೇಶ್ ಆಗಮಿಸಿದ್ದರು.

ಸಂಕಲ್ಪ ಸೇವಾ ಫೌಂಡೇಶನ್‌ನ ಖಜಾಂಚಿ ಭರ್ಮಪ್ಪ ಪಿ, ಸರ್ಕಾರಿ ಪ್ರೌಢಶಾಲೆ ಕಕ್ಕರಗೊಳ್ಳದ ಮುಖ್ಯ ಶಿಕ್ಷಕಿ ಯಮುನಾ ಬಸವರಾಜ್ ಬಡಿಗೇರ್ ಮತ್ತು ಇತರರು ಭಾಗವಹಿಸಿದ್ದರು.

## ರಾಜ್ಯದಿಂದ ಈ ಬಾರಿ ರಾಜೀವ್ ಚಂದ್ರಶೇಖರ್‌ಗೆ ಟಿಕೆಟ್ ಇಲ್ಲ?

ಬೆಂಗಳೂರು, ಫೆ. 9 - ಕೇಂದ್ರದ ಕೌಶಲ್ಯಾಭಿವೃದ್ಧಿ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರಿಗೆ ಈ ಬಾರಿ ಕರ್ನಾಟಕದಿಂದ ರಾಜ್ಯಸಭಾ ಟಿಕೆಟ್ ತಪ್ಪುವ ಸಾಧ್ಯತೆ ಇದೆ. ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಫೆಬ್ರವರಿ 27 ರಂದು ಚುನಾವಣೆ ನಡೆಯಲಿದ್ದು, ಆಡಳಿತಾರೂಢ ಕಾಂಗ್ರೆಸ್‌ಗೆ ಮೂರು ಸ್ಥಾನ, ಪ್ರತಿಪಕ್ಷ ಬಿಜೆಪಿಗೆ ಒಂದು ಸ್ಥಾನ ದೊರೆಯಲಿದೆ.

ಗುರುವಾರದಿಂದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭಗೊಂಡಿದ್ದರೂ ರಾಷ್ಟ್ರೀಯ ಪಕ್ಷಗಳೂ ಇದುವರೆಗೂ ತಮ್ಮ ಉಮೇದುವಾರರನ್ನು ಹೆಸರಿಸಿಲ್ಲ.

ರಾಜೀವ್ ಚಂದ್ರಶೇಖರ್ ಮೂಲತಃ ಕೇರಳದವರಾದರೂ ಕರ್ನಾಟಕದಿಂದ ಎರಡು ಬಾರಿ ರಾಜ್ಯಸಭೆ ಪ್ರವೇಶಿಸಿದ್ದಾರೆ.

ಈ ಬಾರಿ ಅವರನ್ನು ಕೇರಳದ ಯಾವುದಾದರೂ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿಯುವಂತೆ ಬಿಜೆಪಿ ವರಿಷ್ಠರು ಸಲಹೆ ಮಾಡಿದ್ದಾರೆನ್ನಲಾಗಿದೆ.

ರಾಜ್ಯಸಭೆಯ ಒಂದು ಸ್ಥಾನಕ್ಕಾಗಿ ಬಿಜೆಪಿಯಲ್ಲಿ ಭಾರೀ ಲಾಬಿಯೇ ನಡೆದಿದೆ, ಈ ಸ್ಥಾನಕ್ಕೆ ವಿ.ಸೋಮಣ್ಣ, ಹಾಲಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಶಿಕ್ಷಣ ತಜ್ಞ ಪ್ರಭಾಕರ ಕೋರೆ ಆಕಾಂಕ್ಷಿಗಳಾಗಿದ್ದಾರೆ.

ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಚುನಾವಣಾ ಕಣಕ್ಕಿಳಿಯದೆ ರಾಜ್ಯಸಭೆಗೆ ಹೋಗುವ ಇರಾದೆ ಹೊಂದಿದ್ದಾರೆ, ಆದರೆ, ವರಿಷ್ಠರು ತಮ್ಮ ನಿರ್ಧಾರವನ್ನು ಬಹಿರಂಗ ಪಡಿಸಿಲ್ಲ. ಈ ಸ್ಥಾನಕ್ಕೆ ಯಾರನ್ನು ಆಯ್ಕೆ ಮಾಡಬೇಕೆಂದು ತೀರ್ಮಾನ ಕೈಗೊಳ್ಳಲು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ದೆಹಲಿಯಲ್ಲಿಂದು ಪಕ್ಷದ ರಾಷ್ಟ್ರಾಧ್ಯಕ್ಷ ಜೆ.ಪಿ. ನಡ್ಡ ಹಾಗೂ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದಾರೆ.

## ನಗರದಲ್ಲಿ ಇಂದು ಎಸ್‌ಜೆಎಂ ಪಬ್ಲಿಕ್ ಶಾಲಾ ವಾರ್ಷಿಕೋತ್ಸವ

ಎಸ್.ಜೆ.ಎಂ. ಪಬ್ಲಿಕ್ ಸ್ಕೂಲ್ ನ 19 ನೇ ವಾರ್ಷಿಕೋತ್ಸವ ಸಮಾರಂಭವು ಇಂದು ಸಂಜೆ 5 ಗಂಟೆಗೆ ಶಿವಯೋಗ ಮಂದಿರದ ಆವರಣದಲ್ಲಿ ನಡೆಯಲಿದೆ.

ಶ್ರೀ ಬಸವ ಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಪಾಲಿಕೆ ಸದಸ್ಯೆ ರೇಣುಕಾ ಶ್ರೀನಿವಾಸ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಜ್ಞಾನ ಶಕ್ತಿ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಡಿ. ಮಹೇಶ್ವರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ಶ್ರೀ ಬಸವೇಶ್ವರ ಟ್ರಾನ್ಸ್‌ಪೋರ್ಟ್ ಮಾಲೀಕರಾದ ಮಹಾಂತೇಶ್ ವಿ. ಒಣರೊಟ್ಟಿ ಬಹುಮಾನ ವಿತರಿಸುವರು. ಮುಖ್ಯ ಅತಿಥಿಗಳಾಗಿ ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕ ಜಿ.ಬಿ. ವಿನಯ್ ಕುಮಾರ್ ಕಕ್ಕರಗೊಳ್ಳ, ಸಿರ್‌ಪಿ ಭರತ್, ರೂಪ್ಸಾ ರಾಜ್ಯಾಧ್ಯಕ್ಷ ಲೋಕೇಶ್ ತಾಳಿಕಟ್ಟೆ, ಜಿಲ್ಲಾ ಕಾರ್ಯ ನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಇ.ಎಂ. ಮಂಜುನಾಥ ಮತ್ತಿತರರು ಭಾಗವಹಿಸಲಿದ್ದಾರೆ.

## ನಗರದಲ್ಲಿ ಇಂದು ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ವೇದಿಕೆ ಉದ್ಘಾಟನೆ

ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ವೇದಿಕೆ ಜಿಲ್ಲಾ ಘಟಕದ ಉದ್ಘಾಟನಾ ಸಮಾರಂಭ ಇಂದು ಬೆಳಿಗ್ಗೆ 10.30 ಕ್ಕೆ ರೋಟರಿ ಬಾಲಭವನದಲ್ಲಿ ನಡೆಯಲಿದೆ.

ವೇದಿಕೆ ರಾಜ್ಯಾಧ್ಯಕ್ಷ ಹೇಮಂತ್ ನಾಗರಾಜ್ ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾಧ್ಯಕ್ಷ ಯು. ಶ್ರೀನಿವಾಸ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ರಾಜ್ಯ ಉಪಾಧ್ಯಕ್ಷ ಕೆ.ಟಿ. ಮಧು, ರಾಜ್ಯ ಸಮಿತಿ ಸದಸ್ಯ ಗುರುರಾಜ್, ವರದಿಗಾರರ ಕೂಟದ ಅಧ್ಯಕ್ಷ ಕೆ.ಏಕಾಂತಪ್ಪ, ಸುವಿದ್ಯಾನಿಧಿ ಜಿಲ್ಲಾಧ್ಯಕ್ಷ ಡಾ.ಎ.ಎಂ. ಶಿವಕುಮಾರ್, ಹಿರಿಯ ಪತ್ರಕರ್ತ ಬಾ.ಮ. ಬಸವರಾಜಯ್ಯ, ಪತ್ರಕರ್ತ ಹೆಚ್.ಎಂ.ಪಿ.ಕುಮಾರ್, ಪರಶುರಾಮ ಜಗಳಿ, ಆರ್. ಸಿದ್ದು, ಜಗದೀಶ ಗೌಡ ಆಗಮಿಸಲಿದ್ದಾರೆ.

## ನಗರದಲ್ಲಿ ಇಂದು ಇಂಪೀರಿಯಲ್ ಶಾಲೆಯ ಕಲ್ಚರಲ್ ಫೆಸ್ಟ್

ಇಂಪೀರಿಯಲ್ ಪಬ್ಲಿಕ್ ಶಾಲೆಯ 2023-24 ನೇ ಸಾಲಿನ ಆರಂಭ್-2024 ಕಲ್ಚರಲ್ ಫೆಸ್ಟ್ ಕಾರ್ಯಕ್ರಮ ಇಂದು ನಡೆಯಲಿದೆ.

ಶ್ರೀಮತಿ ಚಂದನ್ ಚೇತನ್ ಚಕ್ರವರ್ತಿ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ನಗರ ಮತ್ತು ಜಿಲ್ಲಾ ಗ್ರಂಥಾಲಯ ಇಲಾಖೆ ಉಪನಿರ್ದೇಶಕ ಪಿ. ಆರ್. ತಿಪ್ಪೇಸ್ವಾಮಿ, ಕ್ಷೇತ್ರ ಶಿಕ್ಷಣಾಧಿಕಾರಿ ಶೇರ್ ಅಲಿ, ಸಿಆರ್‌ಪಿ ಸೈಫುಲ್ಲಾ, ಶಾಲಾ ಆಡಳಿತಾಧಿಕಾರಿ ನಿಶಾ ಸಚಿನ್ ಚಕ್ರವರ್ತಿ, ಪ್ರಾಚಾರ್ಯ ಎನ್.ವಿ. ರಮೇಶ್ ಮತ್ತಿತರರು ಭಾಗವಹಿಸಲಿದ್ದಾರೆ.

## ಉಚಿತ ಕಣ್ಣಿನ ಆರೋಗ್ಯ ತಪಾಸಣಾ ಶಿಬಿರ



ಜಗಳೂರು, ಫೆ. 9- ತಾಲ್ಲೂಕಿನ ಅಣಬೂರು ಗ್ರಾಮದಲ್ಲಿ ಈಚೆಗೆ ಉಚಿತ ಕಣ್ಣಿನ ತಪಾಸಣೆಯನ್ನು ವಿಕಾಸ ಗ್ರಾಮೀಣಾಭಿವೃದ್ಧಿ ಸ್ವಯಂ ಸೇವಾ ಸಂಸ್ಥೆ ಹಾಗೂ ದೃಷ್ಟಿ ಕಣ್ಣಿನ ಆಸ್ಪತ್ರೆ (ಚಿತ್ರದುರ್ಗ) ಇವರ ಸಂಯುಕ್ತಾಶ್ರಯದಲ್ಲಿ ನಡೆಸಲಾಯಿತು. ಈ ಸಂದರ್ಭದಲ್ಲಿ ನುರಿತ ವೈದ್ಯರುಗಳಾದ ಡಾ. ಕೀರ್ತಿ ಕುಮಾರ್, ಡಾ. ಶಂಕರ್‌ಗೌಡ, ಡಾ. ಭರತ, ಡಾ. ಪ್ರಹ್ಲಾದ್, ಕೆ. ಮಹಾಲಕ್ಷ್ಮಿ ಕರಿಬಸಪ್ಪ, ಬಿ. ಸಿದ್ದಲಿಂಗಪ್ಪ ಉಪಸ್ಥಿತರಿದ್ದರು.

## ಹರಪನಹಳ್ಳಿ : ವಿದ್ಯಾರ್ಥಿಗಳು ಕೇವಲ ಅಂಕಗಳಿಗೆ ಸೀಮಿತವಾಗಬಾರದು



ಹರಪನಹಳ್ಳಿ, ಫೆ.9- ತಾಲ್ಲೂಕಿನ ಅರಸೀಕೆರೆ ಗ್ರಾಮದ ಎಸ್‌ಎಂಸಿಕೆ ಪದವಿ ಪೂರ್ವ ಕಾಲೇಜಿನಲ್ಲಿ ಶಾರದಾ ಪೂಜೆ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಮಾಜಿ ಶಾಸಕ ಪ್ರೊ. ಲಿಂಗಣ್ಣ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ಗ್ರಾಮಸ್ಥರ ಸಹಕಾರದೊಂದಿಗೆ 1989ರಲ್ಲಿ ಎಸ್‌ಎಂಸಿಕೆ ಕಾಲೇಜು ಸ್ಥಾಪಿಸಲಾಯಿತು ಎಂದು ಹೇಳಿದರು. ಈ ಕಾಲೇಜಿನ ಅನೇಕ ವಿದ್ಯಾರ್ಥಿಗಳು ಉನ್ನತ ಹುದ್ದೆಯಲ್ಲಿದ್ದಾರೆ, ನೀವೂ ಸಹ ಅವರಂತೆ ಉನ್ನತ ಹುದ್ದೆಗೆ ಹೋಗಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ನಂತರ ಪ್ರಶಾಂತ್ ಪಾಟೀಲ್ ಮಾತನಾಡಿ, ವಿದ್ಯಾರ್ಥಿಗಳು ಚನ್ನಾಗಿ ಅಭ್ಯಾಸ ಮಾಡಿ ಉನ್ನತ ಸ್ಥಾನ ಪಡೆದು ಗ್ರಾಮಕ್ಕೆ ಒಳ್ಳೆಯ ಹೆಸರು ತರಬೇಕು ಎಂದು ಹೇಳಿದರು.

ಪ್ರಾಚಾರ್ಯ ಡಾ. ಎಂ. ಸುರೇಶ್ ಮಾತನಾಡಿ, ವಿದ್ಯಾರ್ಥಿಗಳು ಕೇವಲ ಅಂಕಗಳಿಗೆ ಸೀಮಿತವಾಗದೇ, ನೈತಿಕ ಶಿಕ್ಷಣವನ್ನು ಪಡೆದುಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಉಪನ್ಯಾಸಕ ಡಾ. ಆರ್. ಭೀಮಪ್ಪ, ಕುಮಾರ್‌ನಾಯ್ಕ್, ಉಮಾದೇವಿ, ಜಾತಯ್ಯ, ಸೋಮಶೇಖರ್ ಕಿಚಡಿ, ಪೂಜಾರ್ ಮರಿಯಪ್ಪ, ಎ. ಹೆಚ್. ಉಮೇಶ್, ಸಿದ್ದರಾಮನಗೌಡ, ರುದ್ರೇಶ್, ಕೆ. ಶಿವಯೋಗಿ, ಪಿ. ದುರುಗೇಶ್, ಈಶಪ್ಪ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಕೊಟ್ಟೂರು ಪಾದಯಾತ್ರೆಗಳ ಸಭೆ

ಬರುವ ಮಾರ್ಚ್ 4ರ ಸೋಮವಾರ ಶ್ರೀ ಗುರು ಕೊಟ್ಟೂರೇಶ್ವರ ರಥೋತ್ಸವ ಪ್ರಯುಕ್ತ ಶ್ರೀ ಗುರು ಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ (ದಾವಣಗೆರೆ) ಇವರಿಂದ ಇಂದು ಸಂಜೆ 5 ಗಂಟೆಗೆ ಶ್ರೀ ಗುರು ಶೀವಯೋಗಿ ಬಕ್ಕೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪಾದಯಾತ್ರಿಗಳ ಸಭೆಯನ್ನು ಏರ್ಪಡಿಸಲಾಗಿದೆ.

ಸದ್ಭಕ್ತರು ಭಾಗವಹಿಸುವಂತೆ ದೇವಸ್ಥಾನ ಸಮಿತಿಯ ಕಣಕುಪ್ಪಿ ಮುರುಗೇಶಪ್ಪ (96118 8915), ಟಿ.ಜಿ. ಬಕ್ಕೇಶ್ವರಪ್ಪ (91089 88898), ಬಿ. ಚಿದಾನಂದಪ್ಪ (98445 28449), ಮಲ್ಲಾಬಾದಿ ಗುರುಬಸವರಾಜ್ (79757 97079) ತಿಳಿಸಿದ್ದಾರೆ. ದಾಸೋಹ ಮನೆ ಮತ್ತು ಸಭಾಂಗಣ ಕಟ್ಟಡವು ಪ್ರಗತಿ ಹಂತದಲ್ಲಿದೆ. ಭಕ್ತಾದಿಗಳು ದೇಣಿಗೆ ಸಲ್ಲಿಸಲು ಕೋರಲಾಗಿದೆ.

## ನಗರದಲ್ಲಿ ಇಂದು

ಜಿಎಂಐಟಿ ಕಾಲೇಜಿನ ಜಿ. ಎಂ ಹಾಲಮ್ಮ ಆಡಿಟೋರಿಯಂನಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ 'ಭವಿಷ್ಯ ಸೃಷ್ಟಿಸುವ ನಾಯಕತ್ವ' ಕಾರ್ಯಕ್ರಮ ನಡೆಯಲಿದೆ.

ಕಾಲೇಜಿನ ಪ್ರಾಂಶುಪಾಲ ಡಾ. ಎಂ. ಬಿ. ಸಂಜಯ್ ಪಾಂಡೆ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಉಷಾ ಬಾಲಕೃಷ್ಣನ್, ಮಹಿಮಾ ಜೆ. ಪಟೇಲ್, ಶಿವನಕೆರೆ ಬಸವಲಿಂಗಪ್ಪ ಹಾಗೂ ಉದಯ್ ಕುಮಾರ್ ಆಗಮಿಸಲಿದ್ದಾರೆ.

## ಉತ್ತರಾಖಂಡ : ಹಿಂಸಾಚಾರದಲ್ಲಿ ಆರು ಜನರ ಸಾವು

ಹಲ್ದವಾನಿ, ಫೆ. 9 – ಉತ್ತರಾಖಂಡದಲ್ಲಿ ಅಕ್ರಮ ಮದರಸಾಗೆ ಸಂಬಂಧಿಸಿದಂತೆ ಉಂಟಾದ ಹಿಂಸಾಚಾರದಲ್ಲಿ ಆರು ಜನರು ಸಾವನ್ನಪ್ಪಿದ್ದಾರೆ. ಹಲ್ದವಾನಿ ಪ್ರದೇಶದಲ್ಲಿ ಕರ್ಫ್ಯೂ ವಿಧಿಸಲಾಗಿದೆ. ನೈನಿತಾಲ್ ಜಿಲ್ಲೆಯ ಹಲ್ದವಾನಿ ಎಂಬಲ್ಲಿ ಸರ್ಕಾರಿ ಜಮೀನಿನಲ್ಲಿ ಅಕ್ರಮವಾಗಿ ಮದರಸಾ ಹಾಗೂ ಮಸೀದಿ ಹೋಲುವ ಕಟ್ಟಡವೊಂದನ್ನು ಕಟ್ಟಲಾಗಿತ್ತು. ಇದನ್ನು ತೆರವುಗೊಳಿಸಲು ತೆರಳಿದ ನಗರ ಪಾಲಿಕೆ ಸಿಬ್ಬಂದಿ ಹಾಗೂ ಪೊಲೀಸರ ಮೇಲೆ ಕಲ್ಲು ತೂರಲಾಗಿತ್ತು. ನಂತರ ಬನಭೂಪುರ ಪೊಲೀಸ್ ಠಾಣೆಗೆ ಬೆಂಕಿ ಹಚ್ಚಲಾಗಿತ್ತು.

ಕಲ್ಲು ತೂರಾಟದಲ್ಲಿ ಪೊಲೀಸರೂ ಸೇರಿದಂತೆ 60ಕ್ಕೂ ಹೆಚ್ಚು ಜನ ಗಾಯಗೊಂಡಿದ್ದರು. ಜನರನ್ನು ಚೆದುರಿಸಲು ಪೊಲೀಸರು ಗೋಲಿಬಾರ್ ಮಾಡಿದ್ದರು.

## ನಗರದಲ್ಲಿ ಇಂದು ಗಡಿಚೌಡೇಶ್ವರಿ ದೇವಿಯ ವಾರ್ಷಿಕೋತ್ಸವ

ಕುಂದುವಾಡ ರಸ್ತೆಯ ಶ್ರೀ ಗಡಿ ಚೌಡೇಶ್ವರಿ ದೇವಸ್ಥಾನ ಟ್ರಸ್ಟ್ ವತಿಯಿಂದ ಶ್ರೀ ಬನ್ನಿಮಹಾಂಕಾಳಿ, ಶ್ರೀ ವಿನಾಯಕ, ಶ್ರೀ ಈಶ್ವರ, ಶ್ರೀ ಬಸವೇಶ್ವರ ಹಾಗೂ ಶ್ರೀ ಗಡಿಚೌಡೇಶ್ವರಿ ದೇವಿಯ 19 ನೇ ವಾರ್ಷಿಕೋತ್ಸವ ಹಾಗೂ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ 15 ನೇ ವಾರ್ಷಿಕೋತ್ಸವ ಕಾರ್ಯಕ್ರಮಗಳು ಇಂದಿನಿಂದ ಮೂರು ದಿನಗಳ ಕಾಲ ಜರುಗಲಿವೆ.

ಇಂದು ಬೆಳಿಗ್ಗೆ 6.30 ಕ್ಕೆ ಪಂಚಾಮೃತ ಅಭಿಷೇಕದೊಂದಿಗೆ ಕಾರ್ಯಕ್ರಮಗಳು ಆರಂಭಗೊಳ್ಳಲಿದ್ದು, ನಾಳೆ ಭಾನುವಾರ ಬೆಳಿಗ್ಗೆ 6.30 ಕ್ಕೆ ಪಂಚಾಮೃತ ಅಭಿಷೇಕ, ದಿನಾಂಕ 12 ರಂದು ಸೋಮವಾರ ಬೆಳಿಗ್ಗೆ 5.30 ಕ್ಕೆ ಕಾಕಡಾರತಿ ನಂತರ 8.30 ಕ್ಕೆ ಪ್ರಸಾದ ವಿನಿಯೋಗವಿದೆ.


## ನಗರದಲ್ಲಿ ಇಂದು ಕಾರ್ಯಾಗಾರ

ಈಶ್ವರಮ್ಮ ಆಂಗ್ಲ ಮಾಧ್ಯಮ ವಿದ್ಯಾಸಂಸ್ಥೆಯಲ್ಲಿ ಇಂದು ಬೆಳಿಗ್ಗೆ 9 ರಿಂದ 12 ರವರೆಗೆ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗಾಗಿ ಪ್ರೇರಣಾ ಕಾರ್ಯಾಗಾರ ನಡೆಯಲಿದೆ.

ವಿದ್ಯಾರ್ಥಿಗಳು ಅಂಕ ಗಳಿಕೆ ಜೊತೆ ಸಂಸ್ಕಾರ, ಸಂಸ್ಕೃತಿ ಮತ್ತು ವ್ಯಕ್ತಿತ್ವವನ್ನು ಸಹ ಸುಂದರವಾಗಿ ನಿರ್ಮಿಸಿಕೊಂಡು ಭವಿಷ್ಯ ಉಜ್ವಲಗೊಳ್ಳಲಿ ಎಂಬ ಹಿನ್ನೆಲೆಯಲ್ಲಿ ಆಯೋಜಿಸಿರುವ ಈ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿ ಗಂಗಾಧರ ಬಿ.ಎಲ್. ನಿಟ್ಟೂರು ಅವರು 'ನನ್ನ ಸಾಧನೆ, ನನ್ನ ಕನಸು' ಕುರಿತು ಉಪನ್ಯಾಸ ನೀಡಲಿದ್ದಾರೆ.

ಸಂಸ್ಥೆಯ ಪ್ರಾಚಾರ್ಯ ಕೆ.ಎಸ್. ಪ್ರಭುಕುಮಾರ್, ಉಪ ಪ್ರಾಚಾರ್ಯರಾದ ಜಿ.ಎಸ್. ಶಶಿರೇಖಾ ಭಾಗವಹಿಸಲಿದ್ದಾರೆ.

## ಮಾಜಿ ಪ್ರಧಾನಿ ಪಿವಿಎನ್ ರಾವ್, ಚೌಧರಿ ಹಾಗೂ ಕೃಷಿ ತಜ್ಞ ಸ್ವಾಮಿನಾಥನ್‌ಗೆ ಭಾರತ ರತ್ನ



ನವದೆಹಲಿ, ಫೆ. 9 – ಮಾಜಿ ಪ್ರಧಾನ ಮಂತ್ರಿಗಳಾದ ಪಿ.ವಿ. ನರಸಿಂಹ ರಾವ್ ಹಾಗೂ ಚೌಧರಿ ಚರಣ್ ಸಿಂಗ್ ಮತ್ತು ಹಸಿರು ಕ್ರಾಂತಿಯ ಹರಿಕಾರ ಡಾ. ಎಂ.ಎಸ್. ಸ್ವಾಮಿನಾಥನ್ ಅವರಿಗೆ ಕೇಂದ್ರ ಸರ್ಕಾರ ಭಾರತ ರತ್ನ ಪ್ರಕಟಿಸಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಈ ಬಗ್ಗೆ ಘೋಷಣೆ ಮಾಡಿದ್ದಾರೆ. ಕೆಲ ದಿನಗಳ ಹಿಂದೆ ಬಿಹಾರದ ಮಾಜಿ ಮುಖ್ಯಮಂತ್ರಿ ಕರ್ಪೂರಿ ಠಾಕೂರ್ ಹಾಗೂ ಬಿಜೆಪಿ ಹಿರಿಯ ನಾಯಕ ಎಲ್.ಕೆ. ಅಡ್ವಾನಿ ಅವರಿಗೆ ಭಾರತ ರತ್ನ ಪ್ರಕಟಿಸಲಾಗಿತ್ತು.

ಈ ಹಿಂದೆ 1999ರಲ್ಲಿ ಒಂದೇ ವರ್ಷದಲ್ಲಿ ನಾಲ್ವರಿಗೆ ಭಾರತ ರತ್ನ ಪ್ರಕಟಿಸಲಾಗಿತ್ತು. ಈ ವರ್ಷ ಈಗಾಗಲೇ ಐವರಿಗೆ ಪ್ರಶಸ್ತಿ ಪ್ರಕಟಿಸಲಾಗಿದೆ. ಇದುವರೆಗೂ ಒಟ್ಟು 53 ಜನರು ಭಾರತ ರತ್ನ ಪಡೆದಿದ್ದಾರೆ.

ಭಾರತವನ್ನು ಉದಾರವಾದಿ ಆರ್ಥಿಕತೆಯ ಹಾದಿಗೆ ತರುವ ಮೂಲಕ ದೇಶದ ಪ್ರಗತಿಗೆ ಪ್ರಧಾನ ಮಂತ್ರಿ ರಾವ್ ಕೊಡುಗೆ ನೀಡಿದ್ದರು. ಅವರ ಆಡಳಿತ ಅವಧಿಯ ನಂತರ ಭಾರತ ಉನ್ನತ ವೇಗದ ಬೆಳವಣಿಗೆಯ ದಾರಿ ಕಂಡುಕೊಂಡಿತ್ತು. 1991ರಿಂದ 1996ರ ನಡುವೆ ಅವರು ದೇಶದ ಪ್ರಧಾನ ಮಂತ್ರಿಯಾಗಿದ್ದರು.

ಚೌಧರಿ ಚರಣ್ ಸಿಂಗ್ ಅವರು ರೈತ ಪರ ಹೋರಾಟಗಾರರಾಗಿದ್ದರು. 1979-80ರ ನಡುವೆ ಅವರು ದೇಶದ ಪ್ರಧಾನ ಮಂತ್ರಿಯಾಗಿದ್ದರು. ಕಾಂಗ್ರೆಸ್ ವಿರೋಧಿ ರಾಜಕೀಯದಲ್ಲಿ ಪ್ರಮುಖರಾಗಿದ್ದರು.

ಸ್ವಾಮಿನಾಥನ್ ಅವರು ದೇಶದ ಕೃಷಿಗೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ಅವರು ದೇಶದ ಹಸಿರು ಕ್ರಾಂತಿಯ ರೂವಾರಿಯೂ ಆಗಿದ್ದಾರೆ. ಉತ್ತಮ ಆಡಳಿತಗಾರರಾಗಿದ್ದ ಅವರು, ಭಾರತ ಆಹಾರದಲ್ಲಿ ಸ್ವಾವಲಂಬಿಯಾಗಲು ನೆರವಾಗಿದ್ದರು.

### ದೇಶದ್ರೋಹಿಗಳ ಮೇಲೆ ಗುಂಡು

## ಈಶ್ವರಪ್ಪ ಹೇಳಿಕೆ ವಿರುದ್ಧ ಪ್ರಕರಣ ಎಂದ ಸಿಎಂ

ಬೆಂಗಳೂರು, ಫೆ. 9 - ದೇಶ ಒಡೆಯುವ ಮಾತನಾಡುವ ದೇಶದ್ರೋಹಿಗಳ ಮೇಲೆ ಗುಂಡು ಹಾರಿಸಲು ಕೇಂದ್ರ ಸರ್ಕಾರ ಕಾನೂನು ರೂಪಿಸಬೇಕು ಎಂದು ಹೇಳಿದ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ವಿರುದ್ಧ ಪ್ರಕರಣ ದಾಖಲಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಹೊಡಿ, ಬಡಿ, ಕೊಲ್ಲು, ಕತ್ತರಿಸು ಈ ಮಾತುಗಳು ಬಿಟ್ಟರೆ ಈಶ್ವರಪ್ಪ ಅವರಿಗೆ ಬೇರೆ ಏನೂ ಗೊತ್ತಿಲ್ಲ. ಮಾತೆತ್ತಿದರೆ ತಮಗೆ ಆರ್.ಎಸ್.ಎಸ್. ನಲ್ಲಿ ತರಬೇತಿ ಆಗಿದೆ ಎನ್ನುತ್ತಾರೆ, ಇದೇನಾ ಅವರು ಪಡೆದ ತರಬೇತಿ? ಎಂದು ಪತ್ರಕರ್ತರೊಂದಿಗೆ ಮಾತನಾಡಿದ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಗೃಹ ಸಚಿವ ಜಿ. ಪರಮೇಶ್ವರ್, ಈಶ್ವರಪ್ಪ ಹೇಳಿಕೆ ಬಗ್ಗೆ ಈಗಾಗಲೇ ಎಫ್.ಐ.ಆರ್. ದಾಖಲಿಸಲಾಗಿದೆ. ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದಿದ್ದಾರೆ.

ಈಶ್ವರಪ್ಪ ತಮ್ಮ ಹೇಳಿಕೆಯನ್ನು 24 ಗಂಟೆಗಳ ಒಳಗೆ ವಾಪಸ್ ಪಡೆಯಬೇಕು. ಇಲ್ಲವಾದರೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಕಾನೂನು ಸಚಿವ ಹೆಚ್.ಕೆ. ಪಾಟೀಲ್ ಎಚ್ಚರಿಸಿದ್ದಾರೆ.

ಆದರೆ, ತಮ್ಮ ಹೇಳಿಕೆಗೆ ಅಂಟಿಕೊಂಡಿರುವ ಈಶ್ವರಪ್ಪ, ಕಾಂಗ್ರೆಸ್ ಸರ್ಕಾರ ತಾಕತ್ತಿದ್ದರೆ ಪ್ರಕರಣ ದಾಖಲಿಸಲಿ ಎಂದು ಸವಾಲು ಹಾಕಿದ್ದಾರೆ.

ಸಂಸದ ಡಿ.ಕೆ.ಸುರೇಶ್ ದಕ್ಷಿಣ ಭಾರತವನ್ನು ವಿಭಜಿಸುವ ಹೇಳಿಕೆ ನೀಡಿದ್ದಾರೆ. ಶಾಸಕ ವಿನಯ್ ಕುಲಕರ್ಣಿ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬೆಂಬಲ ನೀಡಿದ್ದಾರೆ. ಈ ಹೇಳಿಕೆಗಳನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಇದನ್ನು ಖಂಡಿಸಿದ್ದಾರೆ. ಹೀಗಿರುವಾಗ ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಈ ರೀತಿ ಮಾತನಾಡಿರುವುದು ಅಚ್ಚರಿ ತಂದಿದೆ ಎಂದೂ ಈಶ್ವರಪ್ಪ ಹೇಳಿದ್ದಾರೆ.

ಅವರು ಕೇಸ್ ಹಾಕಲಿ ಎಂದು ಆಗ್ರಹಿಸುತ್ತೇನೆ. ಆಗ ಕೋರ್ಟ್‌ಗೆ ಮಲ್ಲಿಕಾರ್ಜುನ ಖರ್ಗೆ ಸಹ ಬರಬೇಕಾಗುತ್ತದೆ. ನ್ಯಾಯಾಲಯವು ದೇಶ ದ್ರೋಹಿಗಳಿಗೆ ಮನ್ನಣೆ ನೀಡುತ್ತದೆಯೋ, ರಾಷ್ಟ್ರ ಭಕ್ತರಿಗೆ ಮನ್ನಣೆ ನೀಡುತ್ತದೆ ಎಂಬುದು ಗೊತ್ತಾಗುತ್ತದೆ ಎಂದರು.

## ಭಾನುವಳ್ಳಿಯಲ್ಲಿ ಇಂದು ಗ್ರಾಮ ಚಲೋ ಅಭಿಯಾನ

ಇಂದು ಬೆಳಗ್ಗೆ 10.30ಕ್ಕೆ ಮತ್ತು ಮಧ್ಯಾಹ್ನ 12.30ಕ್ಕೆ ಭಾನುವಳ್ಳಿ ಗ್ರಾಮದಲ್ಲಿ ಮುಂಬರುವ ಲೋಕಸಭಾ ಚುನಾವಣೆಯ ಪ್ರಯುಕ್ತ ಬಿಜೆಪಿ ಸಂಘಟನೆಯನ್ನು ಬಲಪಡಿಸುವ ದೃಷ್ಟಿಯಿಂದ ಪ್ರತಿ ಗ್ರಾಮದಲ್ಲೂ 'ವಿಕಸಿತ ಭಾರತಕ್ಕಾಗಿ ಗ್ರಾಮ ಚಲೋ' ಅಭಿಯಾನವನ್ನು ಪ್ರಧಾನಿ ನರೇಂದ್ರ ಮೋದಿ ಅವರ ಸಾಧನೆಗಳ ಕರಪತ್ರವನ್ನು ಹಂಚುವುದರ ಮೂಲಕ ಚಾಲನೆ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಶಾಸಕ ಬಿ.ಪಿ. ಹರೀಶ್, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್ ಹಾಗೂ ರಾಜ್ಯ ರೈತ ಮೋರ್ಚಾ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್, ಯುವ ಮುಖಂಡ ಚಂದ್ರಶೇಖರ್ ಪೂಜಾರ್, ಮುಖ್ಯ ಸಂಚಾಲಕ ಮಹೇಂದ್ರ ಹೆಬ್ಬಾಳ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಐರಣಿ ಅಣ್ಣಪ್ಪ ಮತ್ತು ಬಿಜೆಪಿ ತಾ. ಗ್ರಾಮಾಂತರ ಘಟಕದ ಅಧ್ಯಕ್ಷ ಹಿಂಡಸಘಟ್ಟೆ ಲಿಂಗರಾಜ್ ಭಾಗವಹಿಸಲಿದ್ದಾರೆ ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಅದಾಪುರ ವೀರೇಶ್, ಹುಗ್ಗಿ ಮಹಾಂತೇಶ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಪಂಚಮಸಾಲಿ ಸಮಾಜದ ನೂತನ ಪದಾಧಿಕಾರಿಗಳ ಪದಗ್ರಹಣ

ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ 33 ಮತ್ತು 34 ನೇ ವಾರ್ಡ್ ಘಟಕಗಳ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ಇಂದು ಸಂಜೆ 5 ಗಂಟೆಗೆ ಕೆಎಸ್‌ಎಸ್ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ.

ಶ್ರೀ ವಚನಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಸಮಾಜದ ಜಿಲ್ಲಾಧ್ಯಕ್ಷ ಬಿ.ಸಿ. ಉಮಾಪತಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ. ಲೋಕೇಶ, ಆಡಳಿತಾಧಿಕಾರಿ ಡಾ. ರಾಜ್ ಕುಮಾರ್ ಆಗಮಿಸಲಿದ್ದು, ನಗರ ಘಟಕದ ಅಧ್ಯಕ್ಷ ಕೈದಾಳ್ ಶಿವಶಂಕರ್ ಅಧ್ಯಕ್ಷತೆ ವಹಿಸಲಿದ್ದಾರೆ.

## ಪ್ರಚೋದನಾಕಾರಿ ಹೇಳಿಕೆ: ಕೆ.ಎಸ್. ಈಶ್ವರಪ್ಪ ವಿರುದ್ಧ ಪ್ರಕರಣ ದಾಖಲು

ದಾವಣಗೆರೆ, ಫೆ.9- ದೇಶ ವಿಭಜನೆ ಹೇಳಿಕೆ ನೀಡುವ ದೇಶ ದ್ರೋಹಿಗಳನ್ನು ಗುಂಡಿಕ್ಕಿ ಕೊಲ್ಲುವಂತಹ ಕಾನೂನು ತನ್ನಿ ಎಂದು ಹೇಳಿಕೆ ನೀಡಿರುವ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಅವರ ಮೇಲೆ ನಗರದ ಬಡಾವಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಜಲಿಂಗಪ್ಪ ಬಡಾವಣೆಯ ವಾಸಿ ಹನುಮಂತ ಎಂಬುವವರು ಶುಕ್ರವಾರ ಬಡಾವಣೆ ಪೊಲೀಸ್ ಠಾಣೆಯಲ್ಲಿ ಈಶ್ವರಪ್ಪ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ದೂರು ದಾಖಲಿಸಿದ್ದಾರೆ.

ಸ್ಥಳೀಯ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪದಲ್ಲಿ ನಿನ್ನೆ ಹಮ್ಮಿಕೊಳ್ಳಲಾಗಿದ್ದ ಬಿಜೆಪಿ ಜಿಲ್ಲಾ ನೂತನ ಜಿಲ್ಲಾಧ್ಯಕ್ಷರು ಹಾಗೂ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಸಂಸದ ಡಿ.ಕೆ ಸುರೇಶ್ ಹಾಗೂ ವಿನಯ್ ಕುಲಕರ್ಣಿ ಅವರ ವಿರುದ್ಧ ಹರಿಹಾಯ್ದಿದ್ದರು. ಅಲ್ಲದೇ, ಮೋದಿಯವರೇ, ಇಂತಹ ದೇಶ ದ್ರೋಹಿಗಳನ್ನು ಗುಂಡಿಕ್ಕಿ ಕೊಲ್ಲುವಂತಹ ಕಾನೂನು ತನ್ನಿ ಎಂದು ಹೇಳಿಕೆ ಕೊಟ್ಟಿದ್ದರು ಎಂದು ದೂರಲಾಗಿದೆ. ಡಿ.ಕೆ. ಸುರೇಶ್, ವಿನಯ್ ಕುಲಕರ್ಣಿ ಕೊಲ್ಲುವಂತಹ ಕಾನೂನು ತರಬೇಕು ಎಂದು ಪ್ರಾಣ ಬೆದರಿಕೆ ಹಾಕಿರುವ ಹೇಳಿಕೆ ನೀಡಿದ ಪರಿಣಾಮ ಜನಗಳ ಮಧ್ಯೆ ಗಲಭೆಗಳಾಗಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ಆಗುವ ಸಂಭವ ವಿರುತ್ತದೆ. ಆದ್ದರಿಂದ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಹನುಮಂತಪ್ಪ ಅವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

## ಕಮೀಷನ್ ಆರೋಪದ ಸಿಬಿಐ ತನಿಖೆ ಆಗಲಿ : ವಿಪಕ್ಷ ನಾಯಕ ಅಶೋಕ್

ಹರಿಹರ, ಫೆ.9 - ಮಂತ್ರಿಗಳು, ಶಾಸಕರ ಹೆಸರನ್ನು ಹೇಳಿಕೊಂಡು ಅಧಿಕಾರಿಗಳು ಶೇ.40 ಹಣ ವಸೂಲು ಮಾಡುತ್ತಿದ್ದಾರೆ ಎಂದು ಗುತ್ತಿಗೆದಾರರ ಸಂಘದ ಕೆಂಪಣ್ಣ ಹೇಳಿರುವುದು ನೂರಕ್ಕೆ ನೂರರಷ್ಟು ಸತ್ಯ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಹೇಳಿದ್ದಾರೆ.

ಹರಿಹರ ತಾಲ್ಲೂಕಿನ ರಾಜನಹಳ್ಳಿಗೆ ಮಹರ್ಷಿ ವಾಲ್ಮೀಕಿ ಜಾತ್ರೆಗೆ ಆಗಮಿಸಿದ್ದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆದಾಯ ತೆರಿಗೆ ಇಲಾಖೆಯಿಂದ ದಾಳಿ ಮಾಡಿದಾಗ ನೂರಾರು ಕೋಟಿ ರೂ. ಹಣ ಪತ್ತೆಯಾಗಿದೆ ಎಂದು ಹೇಳಿದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೇ ಲೂಟಿ ಮಾಡುತ್ತಿದೆ. ಇದೊಂದು ಲೂಟಿಕೋರರ ಸರ್ಕಾರ ಎಂದು ಅವರು ಆರೋಪಿಸಿದರು.

ಹಿಂದೆ ಬಿಜೆಪಿ ಸರ್ಕಾರ ಇದ್ದಾಗ ಇದೇ ಗುತ್ತಿಗೆದಾರರ ಸಂಘದ ಕೆಂಪಣ್ಣನನ್ನು ಮುಂದಿಟ್ಟುಕೊಂಡು, ಕಾಂಗ್ರೆಸ್ಸಿನವರೇ ಅಭಿಯಾನ ಮಾಡಿದ್ದರು. ಈಗ ಅದೇ ಕೆಂಪಣ್ಣ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಧ್ವನಿ ಎತ್ತಿದ್ದಾರೆ. ಸಿದ್ದರಾಮಯ್ಯನವರೇ ಶೇ.40 ಕಮೀಷನ್ ಎನ್ನುವಂತಾಗಿದೆ ಎಂದು ಅವರು ಲೇವಡಿ ಮಾಡಿದರು.

ಸಿದ್ದರಾಮಯ್ಯ ಸರ್ಕಾರಕ್ಕೆ ಒಂದು ಕ್ಷಣವೂ ಅಧಿಕಾರದಲ್ಲಿ ಮುಂದುವರೆಯಲು ಅವಕಾಶ ಇಲ್ಲ. ಒಂದಿಷ್ಟಾದರೂ ಮಾನ ಮರ್ಯಾದೆ ಇದ್ದರೆ ರಾಜೀನಾಮೆ ನೀಡಿ, ಅಧಿಕಾರದಿಂದ ಕೆಳಗಿಳಿಯಲಿ. ಆರೋಪವನ್ನು ಸಿ.ಬಿ.ಐ. ತನಿಖೆಗೆ ವಹಿಸಲಿ ಎಂದು ಅಶೋಕ್ ಒತ್ತಾಯಿಸಿದರು.

ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರದ ಕುರಿತಂತೆ ದಾಖಲೆಗಳನ್ನು ನೀಡುವುದಾಗಿ ಸ್ವತಃ ಕೆಂಪಣ್ಣ ಕರೆ ಮಾಡಿದ್ದರು. ಅವರು ದಾಖಲೆಗಳನ್ನು ತಂದು ಕೊಡಲಿ. ಕಾಂಗ್ರೆಸ್ ಸರ್ಕಾರದ ಶೇ.40 ಕಮೀಷನ್ ದಂಧೆಯ ಕುರಿತಂತೆ ವಿಧಾನಸೌಧದ ಒಳಗೆ ಹಾಗೂ ಹೊರಗೆ ನಾವು ಹೋರಾಟ ಮಾಡುತ್ತೇವೆ ಎಂದೂ ಅವರು ಹೇಳಿದರು.

**RS ENTERPRISES**
Near New DC Office Karur Industrial Area Davangere.
Job Requirement for Accountant, 2 experienced in Accounts and GST Filing, Tally. Male of Female
Job Requirement for Tellecalling and Kannada Typing Minimum 2 years Experience only for female.
**Send Resume or whatsapp**
**Contact No. : 78999 27530**

